RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೆಷಲಿಸ್ಟ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

4 ತಿಂಗಳ ಹಿಂದಿನ ವೃದ್ಧೆ ಕೊಲೆ ಪ್ರಕರಣ ಭೇದಿಸಿದ ಪೊಲೀಸ್ ಟೀಂ 2
ವಿಷ್ಣುವರ್ಧನ್ ಬದುಕು ಯುವಜನತೆಗೆ ದಾರಿದೀಪ: ನಾಗರಾಜ ಮೇದಾರ 3
ದುಡ್ಡು ಸಿಕ್ಕಿತು.. ಆದರೆ ಬದುಕು ಎಲ್ಲಿದೆ? 4

ಸಂಪುಟ(Volume): 1 ಸಂಚಿಕೆ (Issue): 71 ● ಪುಟ (Page): 4 ● ದರ: Rs. 4 ಭಾನುವಾರ 20 ಸೆಪ್ಟೆಂಬರ್ 2026 ● 20 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ಡಿಯುಎಸ್‌ಯು ಚುನಾವಣೇಲಿ ಎಬಿವಿಪಿಗೆ ಭರ್ಜರಿ ಗೆಲುವು

**ದೆಹಲಿ:** ಇಡೀ ದೇಶದ ಗಮನ ಸೆಳೆದಿದ್ದದಿಲ್ಲಿ ವಿಶ್ವವಿದ್ಯಾಲಯ ವಿದ್ಯಾರ್ಥಿ ಒಕ್ಕೂಟದ (DUSU) 2026ರ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು, ಒಟ್ಟು 20 ಸುತ್ತುಗಳ ಮತ ಎಣಿಕೆಯ ನಂತರ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ABVP) ನಾಲ್ಕು ಕೇಂದ್ರ ಸ್ಥಾನಗಳ ಪೈಕಿ ಮೂರರಲ್ಲಿ ಭರ್ಜರಿ ಜಯ ಗಳಿಸಿದೆ. ಇನ್ನು ಉಪಾಧ್ಯಕ್ಷ ಸ್ಥಾನವನ್ನು ಸ್ವತಂತ್ರ ಅಭ್ಯರ್ಥಿ ದೀಪಾಂಶು ಶೋಕೀನ್ ಗೆಲ್ಲುವ ಮೂಲಕ ಹೊಸ ಇತಿಹಾಸ ನಿರ್ಮಿಸಿದ್ದಾರೆ.

ಎಬಿವಿಪಿಯ ಯಶ್ ದಬಾಸ್ 24,576 ಮತಗಳನ್ನು ಪಡೆಯುವ ಮೂಲಕ ಅಧ್ಯಕ್ಷ ಸ್ಥಾನವನ್ನು ತಮ್ಮದಾಗಿಸಿಕೊಂಡರು. ಅವರು ತಮ್ಮ ಸಮೀಪದ ಸ್ಪರ್ಧಿ, ಎನ್‌ಎಸ್ ಯುಐ ನ ವಿಜಯ್ ಶಂಕರ್ ಮೀನಾ (22,523 ಮತಗಳು) ಅವರನ್ನು ಸೋಲಿಸಿದರು. ಇನ್ನು ಕಾರ್ಯದರ್ಶಿ ಸ್ಥಾನವನ್ನು ಎಬಿವಿಪಿಯ ರಿಯಾ ಛಾವ್ಡಿ (21,650 ಮತಗಳು) ಹಾಗೂ ಜಂಟಿ ಕಾರ್ಯದರ್ಶಿ ಸ್ಥಾನವನ್ನು ಲಕ್ಷ್ಯ ರಾಜ್ ಸಿಂಗ್ (16,615 ಮತಗಳು) ಗೆದ್ದುಕೊಂಡರು.

**ಸ್ವತಂತ್ರ ಅಭ್ಯರ್ಥಿಗೆ ಐತಿಹಾಸಿಕ ಜಯ:** ಮಾಜಿ ಎನ್‌ಎಸ್‌ಯುಐ ಸದಸ್ಯ ಹಾಗೂ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ದೀಪಾಂಶು ಶೋಕೀನ್ 30,615 ಅತ್ಯಧಿಕ ಮತಗಳನ್ನು ಪಡೆಯುವ ಮೂಲಕ ಉಪಾಧ್ಯಕ್ಷ ಸ್ಥಾನದಲ್ಲಿ ಐತಿಹಾಸಿಕ ಜಯ ಸಾಧಿಸಿದರು. ಎಬಿವಿಪಿಯ ಇಶು ಮೌರ್ಯ (16,910 ಮತಗಳು) ಎರಡನೇ ಸ್ಥಾನ ಹಾಗೂ ಎನ್‌ಎಸ್‌ಯುಐನ ವೀರ್ ಛತ್ರಾತ್ (4,313 ಮತಗಳು) ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

ದಿಲ್ಲಿ ಹೈಕೋರ್ಟ್ ನಿರ್ದೇಶನದಂತೆ, ವಿಶ್ವವಿದ್ಯಾಲಯದ ಕ್ಯಾಂಪಸ್ ಹಾಗೂ ಕ್ಯಾಂಪಸ್‌ನ ಹೊರಗೆ ಯಾವುದೇ ವಿಜಯೋತ್ಸವ ರ್‍ಯಾಲಿಗಳನ್ನು ನಡೆಸದಂತೆ ಗೆಲುವಿನ ಅಭ್ಯರ್ಥಿಗಳು ಮತ್ತು ಬೆಂಬಲಿಗರಿಗೆ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಈ ಫಲಿತಾಂಶದ ಬಳಿಕ ಎಕ್ಸ್ ಪೋಸ್ಟ್ ಮಾಡಿರುವ ಸಂಸದ ತೇಜಸ್ವಿ ಸೂರ್ಯ, "ದಿಲ್ಲಿ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ನಿರ್ಣಾಯಕ ಗೆಲುವು ಸಾಧಿಸಿದ ಎಬಿವಿಪ ಅಭ್ಯರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು. ಯುವಜನತೆಯು ರಾಷ್ಟ್ರೀಯತಾವಾದಿ ಸಿದ್ಧಾಂತ ಮತ್ತು 'ರಾಷ್ಟ್ರವೇ ಮೊದಲು' ಎಂಬ ಭಾವನೆಯೊಂದಿಗೆ ನಿಂತಿದೆ ಎಂಬುದನ್ನು ಈ ಗೆಲುವು ಪುನರುಚ್ಚರಿಸುತ್ತದೆ. ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಅವರ ಮುಂದಿನ ಯಶಸ್ವಿ ಅಧಿಕಾರಾವಧಿಗಾಗಿ ಶುಭಾಶಯಗಳು. ಇದೇ ನಿಜವಾದ ವಿದ್ಯಾರ್ಥಿಗಳ ಧ್ವನಿ" ಎಂದು ಉಲ್ಲೇಖಿಸಿದ್ದಾರೆ.



**ಗೆದ್ದವರು ಏನು ಹೇಳಿದರು?:** ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಯಶ್ ದಬಾಸ್ ಮಾತನಾಡಿ, "ಎಲ್ಲಾ ವಿದ್ಯಾರ್ಥಿಗಳಿಗೆ ಸೂಕ್ತ ಹಾಸ್ಟೆಲ್ (ವಸತಿ ನಿಲಯ) ಸೌಲಭ್ಯ ಒದಗಿಸುವುದು ನನ್ನ ಮೊದಲ ಆದ್ಯತೆಯಾಗಿದೆ" ಎಂದರು. ಅಲ್ಲದೆ, ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಎನ್‌ಎಸ್‌ಯುಐ ಮಾಡಿದ ಆರೋಪಗಳನ್ನು ಅವರು ತಳ್ಳಿಹಾಕಿದರು.

ಉಪಾಧ್ಯಕ್ಷರಾಗಿ ಆಯ್ಕೆಯಾದ ದೀಪಾಂಶು ಶೋಕೀನ್ ಮಾತನಾಡಿ, "ಇಂದಿನ 'ಜೆನ್ ಜಿ' (Gen Z) ಯುವ ಪೀಳಿಗೆ ಹೆಚ್ಚು ಜಾಗರೂಕವಾಗಿದೆ. ಅವರಲ್ಲಿ ಉತ್ತಮ ಅರಿವಿದ್ದು, ಅವರನ್ನು ಯಾರೂ ಸುಲಭವಾಗಿ ಮೂರ್ಖರನ್ನಾಗಿಸಲು ಸಾಧ್ಯವಿಲ್ಲ. ನಾನು ವಿದ್ಯಾರ್ಥಿಗಳಿಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ" ಎಂದರು. ಸಾತ್ಯಾ ನಿಕೇತನ ಘಟನೆಯ ಸಂತ್ರಸ್ತರಿಗೆ ನ್ಯಾಯ ಸಿಗುವವರೆಗೂ ನಾನು ಪಾದರಕ್ಷೆ ಧರಿಸುವುದಿಲ್ಲ ಎಂದು ಅವರು ಶಪಥ ಮಾಡಿದರು.

ಕಾರ್ಯದರ್ಶಿಯಾಗಿ ಆಯ್ಕೆಯಾದ ರಿಯಾ ಛಾವ್ಡಿ ಮಾತನಾಡಿ, "ಕ್ಯಾಂಪಸ್ ನಲ್ಲಿ ವಿದ್ಯಾರ್ಥಿನಿಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು" ಎಂದರು. ಹಿಂದೆ ತಾವು ಸ್ಪರ್ಧಿಸಿ ಸೋತಿದ್ದರೂ ನಿರಂತರ ಪ್ರಯತ್ನದಿಂದ ಈ ಬಾರಿ ಜಯ ಗಳಿಸಿದ್ದಾಗಿ ನೆನಪಿಸಿಕೊಂಡ ಅವರು, ಯುವ ವಿದ್ಯಾರ್ಥಿಗಳು ಭರವಸೆ ಕಳೆದುಕೊಳ್ಳದೆ ತಮ್ಮ ಗುರಿಗಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

# ಹುಬ್ಬಳ್ಳಿಯಲ್ಲಿ ಅಮಿತ್ ಶಾ ಅಸ್ವಸ್ಥ

**ಹುಬ್ಬಳ್ಳಿ:** ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಅವರು ಹಠಾತ್ ಅಸ್ವಸ್ಥಗೊಂಡ ಹಿನ್ನೆಲೆಯಲ್ಲಿ ಶನಿವಾರ (ಸೆಪ್ಟೆಂಬರ್ 19) ಹುಬ್ಬಳ್ಳಿಯಲ್ಲಿ ನಡೆಯಬೇಕಿದ್ದ 'ಕೆಎಲ್‌ಇ ಸಂಸ್ಥೆಯ ಜಗದ್ಗುರು ಗಂಗಾಧರ ಮಹಾಸ್ವಾಮಿಗಳ ಮೂರುಸಾವಿರಮಠ ವೈದ್ಯಕೀಯ ಕಾಲೇಜು ಹಾಗೂ 1,200 ಹಾಸಿಗೆಗಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಿಂದ ಗೈರುಹಾಜರಾಗಿದ್ದಾರೆ.



ಹುಬ್ಬಳ್ಳಿಯ ಕಾರ್ಯಕ್ರಮದ ಬಳಿಕ ಕೇಂದ್ರ ಸಚಿವ ಅಮಿತ್ ಶಾ ಅವರು ಬೆಳಗಾವಿ ಜಿಲ್ಲೆಯಲ್ಲಿ ನಡೆಯಬೇಕಿದ್ದ 'ಶ್ರೀ ಬೀರೇಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ'ಯ ನೂತನ ಪ್ರಧಾನ ಕಚೇರಿ ಕಟ್ಟಡ ಉದ್ಘಾಟನೆಯಲ್ಲೂ ಭಾಗವಹಿಸಬೇಕಿತ್ತು. ಆದರೆ ವೈದ್ಯರ ಸಲಹೆ ಮೇರೆಗೆ ಅವರು ಹೋಟೆಲ್ ನಲ್ಲೇ ಉಳಿದುಕೊಂಡಿದ್ದಾರೆ.

**ವೈದ್ಯರ ಸಲಹೆ ಮೇರೆಗೆ ವಿಶ್ರಾಂತಿ:** ಎರಡು ದಿನಗಳ ಕರ್ನಾಟಕ ಪ್ರವಾಸದ ಭಾಗವಾಗಿ ಶುಕ್ರವಾರ (ಸೆಪ್ಟೆಂಬರ್ 18) ತಡರಾತ್ರಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಅಮಿತ್ ಶಾ ಅವರನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ವಾಗತಿಸಿದ್ದರು. ಶನಿವಾರ ಬೆಳಿಗ್ಗೆ 11 ಗಂಟೆಗೆ ಗಬ್ಬೂರಿನಲ್ಲಿ ಆಯೋಜಿಸಲಾಗಿದ್ದ ಬೃಹತ್ ಉದ್ಘಾಟನಾ ಸಮಾರಂಭಕ್ಕೆ ಅಮಿತ್ ಶಾ ಮುಖ್ಯ ಅತಿಥಿಯಾಗಿ ಭಾಗವಹಿಸಬೇಕಿತ್ತು. ಬೆಳಿಗ್ಗೆಯವರೆಗೂ ಆರೋಗ್ಯವಾಗಿದ್ದ ಅವರು, ತದನಂತರ ದಿಢೀರನೆ ಅಸ್ವಸ್ಥಗೊಂಡರು. ವೈದ್ಯರು ಪರೀಕ್ಷೆ ನಡೆಸಿ ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಿದ ಹಿನ್ನೆಲೆಯಲ್ಲಿ ಅವರು ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲೇ ಉಳಿದುಕೊಂಡರು.

ಈ ಕುರಿತು ನೆರೆದಿದ್ದ ಸಾವಿರಾರು ಜನರಿಗೆ ಮಾಹಿತಿ ನೀಡಿದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಡಾ. ಪ್ರಭಾಕರ್ ಕೋರೆ, "ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಮುಖ್ಯ ಆಕರ್ಷಣೆಯಾಗಿದ್ದರು. ಆದರೆ ದಿಢೀರ್ ಆರೋಗ್ಯ ಸಮಸ್ಯೆಯಿಂದಾಗಿ ವೈದ್ಯರ ಸೂಚನೆಯಂತೆ ಅವರು ಹೋಟೆಲ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಈ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದ್ದು, ಈ ಸಂದೇಶವನ್ನು ನಿಮಗೆ ತಲುಪಿಸಲು ತಿಳಿಸಿದ್ದಾರೆ" ಎಂದು ಹೇಳಿದರು.

**ಇತರ ಗಣ್ಯರಿಂದ ಉದ್ಘಾಟನೆ:** ಅಮಿತ್ ಶಾ ಅವರ ಗೈರಿನ ನಡುವೆಯೂ ಕಾರ್ಯಕ್ರಮವು ನಿಗದಿತ ಸಮಯಕ್ಕೆ ನೆರವೇರಿತು. ಶ್ರೀ ಜಗದ್ಗುರು ಮೂರುಸಾವಿರಮಠದ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೆಳಗಾವಿ ಸಂಸದ ಜಗದೀಶ್ ಶೆಟ್ಟರ್ ಹಾಗೂ ಪ್ರಭಾಕರ್ ಕೋರೆ ಅವರು ಜಂಟಿಯಾಗಿ ನೂತನ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಉದ್ಘಾಟಿಸಿದರು.

# ಕಾಂಗ್ರೆಸ್ ಅಭಿವೃದ್ಧಿ ಕೆಲಸಗಳು ಮೂಗಿಗೆ ತುಪ್ಪ ಸವರಿದಂತಾಗಿದೆ: ಸಚಿವ ಪ್ರಿಯಾಂಕ ಖರ್ಗೆ

**ಬೆಂಗಳೂರು:** ಕರಾವಳಿಗರ ಕೈಗೆ ರಕ್ತ ಸವರುತ್ತಿದ್ದ ಬಿಜೆಪಿಗೆ ಕಾಂಗ್ರೆಸ್ ಅಭಿವೃದ್ಧಿ ಕೆಲಸಗಳು ಮೂಗಿಗೆ ತುಪ್ಪ ಸವರಿದಂತೆ ಕಾಣುತ್ತಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ. ಮಂಗಳೂರು ಕ್ಯಾಬಿನೆಟ್ ಬಗ್ಗೆ "ಮೂಗಿಗೆ ತುಪ್ಪ ಸವರುವ ಕ್ಯಾಬಿನೆಟ್" ಎಂಬ ಬಿಜೆಪಿ ಆರೋಪದ ವಿರುದ್ಧ ವಾಗ್ದಾಳಿ ನಡೆಸಿದರು.



## ಪ್ರಗತಿ ವಿಷಯ ಚಿಂತನೆ

ಜನತೆ ಕೋಮು ವಿಷಯಗಳನ್ನು ಬಿಟ್ಟು ಪ್ರಗತಿಯ ವಿಷಯಗಳತ್ತ ಚಿಂತನೆಗಳನ್ನು ಆರಂಭಿಸಿರುವುದೇ ಬಿಜೆಪಿಗೆ ಅಸ್ತಿತ್ವದ ಭಯ ಕಾಡಲು ಶುರುವಾಗಿದೆ ಎಂದು ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದರು. ಕರಾವಳಿಯಲ್ಲಿ ಮೊದಲ ಬಾರಿಗೆ ಸಚಿವ ಸಂಪುಟ ಸಭೆ ನಡೆದಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಬೆಂಗಳೂರಿಗರಿಗೆ ನೀರಿನ ಕೊರತೆ ನೀಗಿಸಲು ಬಂತು ಹೊಸ ಪ್ಲಾನ್, ಏನಿದು ಸ್ಪಾಂಜ್ ಸಿಟಿ ಯೋಜನೆ?

ಮೂಗಿಗೆ ತುಪ್ಪ ಸವರುವ ಕ್ಯಾಬಿನೆಟ್ ಎನ್ನುವುದು ಬಿಜೆಪಿಗರ ಹತಾಶೆಯ ಟೀಕೆ, ಕರಾವಳಿಗರ ಕೈಗೆ ರಕ್ತ ಸವರುವುದನ್ನೇ ಕೆಲಸವನ್ನಾಗಿ ಮಾಡಿಕೊಂಡಿದ್ದ ಬಿಜೆಪಿಗೆ ನಮ್ಮ ಅಭಿವೃದ್ಧಿಪರ ನಿಲುವುಗಳನ್ನು ನೋಡಿ ತಳಮಳ ಶುರುವಾಗಿದೆ ಎಂದು ಕಿಡಿಕಾರಿದರು.

ಬಿಜೆಪಿ ಕರಾವಳಿಯನ್ನು ಕೋಮುವಾದದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿತ್ತು, ನಾವು ಅಭಿವೃದ್ಧಿಯ ಪ್ರಯೋಗಶಾಲೆಯಾಗಿ ಪರಿವರ್ತಿಸುತ್ತಿದ್ದೇವೆ. ಬಿಜೆಪಿ ಕರಾವಳಿಯನ್ನು ಕೇವಲ ಮತಬ್ಯಾಂಕಿನ ಪ್ರದೇಶವಾಗಿ ಮಾತ್ರ ಕಾಣುತ್ತದೆ, ನಾವು ಕರಾವಳಿಯಲ್ಲಿ ಪ್ರಗತಿಯ ಸಾಧ್ಯತೆಗಳನ್ನು ಕಾಣುತ್ತಿದ್ದೇವೆ ಎಂದರು.

ಬಿಜೆಪಿಗರು ಕರಾವಳಿಗೆ ಕಾಲಿಡುತ್ತಿದ್ದಿದ್ದು ಹೊಡಿ, ಬಡಿ ಎಂಬ ಪ್ರಚೋದನೆಯ ಭಾಷಣ ಕುಟ್ಟುವುದಕ್ಕೆ ಮಾತ್ರವಾಗಿತ್ತು, ನಾವು ಕರಾವಳಿಗರ ಆತ್ಮಗೌರವವನ್ನು ಗೌರವಿಸಲು ಕಾಲಿಟ್ಟಿದ್ದೇವೆ.

ಬಿಜೆಪಿ ಕರಾವಳಿಯಲ್ಲಿ ಕೋಮು ಕಲಹದ ಚರ್ಚೆಗಳನ್ನು ಮಾತ್ರ ಹುಟ್ಟು ಹಾಕುತ್ತಿತ್ತು,

ನಾವು ಡೇಟಾ ಸೆಂಟರ್, ವಾಟರ್ ಮೆಟ್ರೋ, ಪ್ರವಾಸೋದ್ಯಮ, ಮರೀನ್ ಬಯೋಟೆಕ್, ಮಾಹಿತಿ ತಂತ್ರಜ್ಞಾನಗಳಂತಹ ಪ್ರಗತಿಪರ ವಿಷಯಗಳ ಚರ್ಚೆ ಹುಟ್ಟುಹಾಕಿದ್ದೇವೆ. ದಕ್ಷಿಣ ಕನ್ನಡದ ಜನರ ಬೇಡಿಕೆಗಳನ್ನು ಕೇಳಿಸಿಕೊಳ್ಳುವ ಕೆಲಸ ಬಿಜೆಪಿಗರು ಮಾಡಿರಲಿಲ್ಲ, ತುಳುವನ್ನು ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಿಸಿದ್ದು ನಮ್ಮ ಸರ್ಕಾರ ಎಂದು ಸರ್ಕಾರದ ನಡೆಯನ್ನು ಒತ್ತಿಹೇಳಿದರು. ಕೋಮು ಪ್ರಚೋದನೆ ಮತ್ತು ರಕ್ತ ಕಣ್ಣೀರು ಇವೆರಡನ್ನೂ ಹೊರತುಪಡಿಸಿದರೆ ಕರಾವಳಿಗೆ ಬಿಜೆಪಿ ಕೊಟ್ಟ ಕೊಡುಗೆ ಶೂನ್ಯ. ಕರಾವಳಿಯ 3 ಜಿಲ್ಲೆಗಳಿಗೆ 32,611 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಗಳ ಘೋಷಣೆ ಐತಿಹಾಸಿಕವಾದುದು, ಕರಾವಳಿಯನ್ನು ಮತಬ್ಯಾಂಕ್ ಮಾಡಿಕೊಂಡಿದ್ದ ಬಿಜೆಪಿಗೆ ಈ ಅಭಿವೃದ್ಧಿಪರ ನಿಲುವು ತಳೆಯುವುದಕ್ಕೆ ಸಾಧ್ಯವಾಗಲಿಲ್ಲ ಏಕೆ? ಎಂದು ಪ್ರಶ್ನಿಸಿದರು.

# ನೈಸ್ ಕಂಪನಿ ಅಕ್ರಮ, ಶೀಘ್ರ ಬಹಿರಂಗ; ನಿಖಿಲ್

**ಕೋಲಾರ:** ನೈಸ್ ಯೋಜನೆಯಲ್ಲಿ ಭಾರೀ ಅಕ್ರಮ ನಡೆದಿದೆ, ನೈಸ್ ಸಂಸ್ಥೆಯವರು ನೂರಾರು ಕೋಟಿ ರೂಪಾಯಿ ಹಣ ಗಳಿಸಿದ್ದಾರೆ. ಈ ಬಗ್ಗೆ ವಿವರಗಳನ್ನು ಸದ್ಯದಲ್ಲೇ ಬಹಿರಂಗ ಮಾಡುತ್ತೇನೆ ಎಂದು ನಿಖಿಲ್ ಕುಮಾರಸ್ವಾಮಿ ಸುಳಿವು ನೀಡಿದರು.

ನೈಸ್ ವಿಚಾರದಲ್ಲಿ ನಾನು ಇಲ್ಲಿ ಹೆಚ್ಚು ಮಾತನಾಡುವುದಿಲ್ಲ, ಮುಂದೆ ಹೋಗುತ್ತಾ ಹೋಗುತ್ತಾ ನಿಮಗೆಲ್ಲ ಗೊತ್ತಾಗುತ್ತದೆ. ಇನ್ನೊಂದು ವಾರದಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ. ನೈಸ್ ಯೋಜನೆಯಿಂದಾಗಿ ನಮ್ಮ ಭಾಗದ ರೈತರಿಗೆ ದೊಡ್ಡ ಮಟ್ಟದ ಅನ್ಯಾಯವಾಗಿದೆ. ರೈತರಿಗೆ ನ್ಯಾಯ ಕೊಡಿಸಲು ಮುಂದೆಯೂ ನಿರಂತರ ಹೋರಾಟ ನಡೆಯಲಿದೆ ಎಂದರು.

**ಬಾಲಕೃಷ್ಣ ಅವರಿಗೆ ಸಚಿವ ಸ್ಥಾನ ಕಾಂಟ್ರಾಕ್ಟ್ ರೂಪದಲ್ಲಿ ಸಿಕ್ಕಿದೆ:** ಬಾಲಕೃಷ್ಣ ಅವರಿಗೆ ಸಚಿವ ಸ್ಥಾನ ಕಾಂಟ್ರಾಕ್ಟ್ ರೂಪದಲ್ಲಿ ಸಿಕ್ಕಿದೆ. ಮಾಜಿ ಪ್ರಧಾನಿ ದೇವೇಗೌಡರ ಕುಟುಂಬ ಮತ್ತು ಕುಮಾರಸ್ವಾಮಿ ಅವರನ್ನು ಅತಿಯಾಗಿ ನಿಂದಿಸಿದ್ದಕ್ಕಾಗಿಯೇ ಅವರಿಗೆ ಕಾಂಟ್ರಾಕ್ಟ್ ರೂಪದಲ್ಲಿ ಸಚಿವ ಸ್ಥಾನ ನೀಡಲಾಗಿದೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಗುಡುಗಿದರು.

ಮಾಲೂರಿನ ವೈಟ್ ಗಾರ್ಡನ್ ನಲ್ಲಿ ಆಯೋಜಿಸಿದ್ದ ಜೆಡಿಎಸ್ ಕೋರ್ ಕಮಿಟಿ ಸಭೆಯಲ್ಲಿ ಪಾಲ್ಗೊಂಡು ಮಾಧ್ಯಮಗಳ ಜೊತೆ ಮಾತನಾಡಿದರು. ಸಚಿವ ಸ್ಥಾನ ಸಿಕ್ಕಾಗ ಜನಸೇವೆ ಮಾಡುವುದನ್ನು ಬಿಟ್ಟು ಪ್ರತಿದಿನ ದೇವೇಗೌಡರ ಕುಟುಂಬದ ವಿರುದ್ಧ ಮಾತನಾಡುತ್ತಿದ್ದಾರೆ. ಇಂದಿನ ಯುವ ಪೀಳಿಗೆ ಹಾಗೂ ಜನತೆ ಇದನ್ನು ಒಪ್ಪುವುದಿಲ್ಲ. ಕೇವಲ ರಾಜಕೀಯ ನಿಂದನೆ ಬಿಟ್ಟು ಕೆಲಸ ಮತ್ತು ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚೆ ಮಾಡಲಿ ಎಂದು ಸಚಿವರ ವಿರುದ್ಧ ಅವರು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸಚಿವ ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಟೆಸ್ಟಿಂಗ್ ಯೂನಿಟ್ ತರಲು ಈಗಾಗಲೇ ತೀರ್ಮಾನ ಮಾಡಿದ್ದಾರೆ ಮತ್ತು ಅದಕ್ಕೆ ಸಂಪೂರ್ಣವಾಗಿ ಸಿದ್ಧರಾಗಿದ್ದಾರೆ. ಅವರಿಗೆ ಲಭ್ಯವಿರುವ ಭೂಮಿಯಲ್ಲಿ ಟೆಸ್ಟಿಂಗ್ ಯೂನಿಟ್ ಹಾಕಿ ಕೈಗಾರಿಕಾ ಅಭಿವೃದ್ಧಿ ಮಾಡಲು ಅವಕಾಶವಿದೆ. ಕುಮಾರಣ್ಣನಿಗೆ ಒಳ್ಳೆಯ ಹೆಸರು ಬಂದುಬಿಡುತ್ತದೆ ಎಂದು ರಾಜ್ಯ ಸರ್ಕಾರ ಈ ವಿಷಯದಲ್ಲಿ ರಾಜಕೀಯ ಮಾಡುತ್ತಿದೆ. ಇಂತಹ ವಿಷಯಗಳಲ್ಲಿ ರಾಜಕೀಯ ಮಾಡಬೇಡಿ, ರಾಜ್ಯದ ಜನರ ಏಳಿಗೆಗಾಗಿ, ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿರುವ ಯುವಕರಿಗೆ ಭವಿಷ್ಯ ಕಟ್ಟಿ-ಕೊಡಿ.



## ರಾಜ್ಯದಲ್ಲಿ ಬರ ಪರಿಸ್ಥಿತಿ – ಸಾಲಮನ್ನಾಕ್ಕೆ ಆಗ್ರಹ

ಇಡೀ ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗಿದೆ. ಆದರೆ ರೈತರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸ್ವಲ್ಪವಾದರೂ ಕಾಳಜಿ, ಚಿಂತನೆ ಮತ್ತು ಬದ್ಧತೆ ಇಲ್ಲ. ನಾನು ಕೂಡ ಉತ್ತರ ಕರ್ನಾಟಕ ಭಾಗಕ್ಕೆ ಪ್ರವಾಸ ಮಾಡಿ ಬಂದಿದ್ದೇನೆ. ಸೂಕ್ತ ಸಮಯಕ್ಕೆ ಮಳೆಯಾಗದ ಕಾರಣ ಮಳೆಯನ್ನೇ ನೆಚ್ಚಿಕೊಂಡು ಬೆಳೆ ಬೆಳೆದಿದ್ದ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಸರ್ಕಾರ ಕೇವಲ 102 ತಾಲೂಕುಗಳನ್ನು ಮಾತ್ರ ಬರಪೀಡಿತ ಎಂದು ಘೋಷಿಸಿದೆ. ಆದರೆ ಬರ ಪರಿಸ್ಥಿತಿ 102 ತಾಲೂಕುಗಳಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದ ಎಲ್ಲಾ 236 ತಾಲೂಕುಗಳನ್ನೂ ಬರಪೀಡಿತ ಎಂದು ಘೋಷಣೆ ಮಾಡಬೇಕು ಮತ್ತು ರೈತರ ಆತ್ಮಹತ್ಯೆ ತಡೆಗಟ್ಟಲು ಕೂಡಲೇ ಸಾಲಮನ್ನಾ ಮಾಡಬೇಕು.

**ಒಂದು ಸಮುದಾಯದ ಓಲೈಕೆ ರಾಜಕಾರಣ ಮಾಡಬಾರದು:** ಹಬ್ಬ-ಆಚರಣೆಗಳನ್ನು ಜನ ಮುಕ್ತವಾಗಿ 1-2 ದಿನ ಆಚರಿಸಲು ಸರ್ಕಾರ ಅವಕಾಶ ಮಾಡಿಕೊಡಬೇಕು. ಕಾನೂನಿನ ಚೌಕಟ್ಟಿನಲ್ಲಿ ಯಾವುದೇ ಗೊಂದಲ, ಸಮಸ್ಯೆ ಆಗದಂತೆ ಸರ್ಕಾರ ನಡೆದುಕೊಳ್ಳಬೇಕು. ಯಾವುದೋ ಒಂದು ಸಮುದಾಯ ಅಥವಾ ಧರ್ಮವನ್ನು ಓಲೈಕೆ ಮಾಡುವುದನ್ನು ಬಿಟ್ಟು ಸರ್ವ ಜನಾಂಗದ ಜೊತೆ ಸರ್ಕಾರ ನ್ಯಾಯಯುತವಾಗಿ ನಡೆದುಕೊಳ್ಳಬೇಕು. ಪ್ರಸ್ತುತ ಸರ್ಕಾರ ಅದನ್ನು ಪಾಲಿಸುತ್ತಿಲ್ಲ.

# ಕಲ್ಲು ಕ್ವಾರಿ ದಂಡ ಪ್ರಕರಣದಲ್ಲಿ ರಾಜ್ಯದ ಹಲವರಲ್ಲಿ ನಾನೂ ಒಬ್ಬ

## ಜವಳಿ ಮತ್ತು ಸಕ್ಕರೆ ಸಚಿವ ರುದ್ರಪ್ಪ ಲಮಾಣಿ ಹೇಳಿಕೆ

**ಹಾವೇರಿ:** ಕಲ್ಲು ಕ್ವಾರಿ ಪರವಾನಗಿ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ತಮ್ಮ ಮೇಲೆ 3.52 ಕೋಟಿ ಕೋಟಿ ರೂ. ದಂಡ ವಿಧಿಸಲಾಗಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿರುವ ಜವಳಿ ಮತ್ತು ಸಕ್ಕರೆ ಖಾತೆ ಸಚಿವ ರುದ್ರಪ್ಪ ಲಮಾಣಿ, ರಾಜ್ಯಾದ್ಯಂತ ಇದೇ ರೀತಿಯ ಪ್ರಕರಣಗಳಲ್ಲಿ ಕ್ವಾರಿ ಮಾಲೀಕರಿಗೆ ನೋಟಿಸ್ ನೀಡಲಾಗಿದೆ. ಈ ಪ್ರಕರಣದಲ್ಲಿ ನಾನು ಒಬ್ಬನಷ್ಟೇ. ಡ್ರೋನ್ ಕ್ಯಾಮೆರಾ ಮೂಲಕ ಸರ್ವೇ ನಡೆಸಿ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದರು.



ಹಿರೇಕೆರೂರಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲ್ಲು ಕ್ವಾರಿಗಳು ಬಹಳ ಹಿಂದಿನಿಂದಲೂ ಇರುವಂತಹವು. ಕೆಲವು ಕ್ವಾರಿಗಳು ನೂರಾರು ವರ್ಷಗಳಷ್ಟು ಹಳೆಯವಾಗಿವೆ. ಇಲಾಖೆ ಕ್ವಾರಿ ಲೀಸ್ ನೀಡುವ ಮುನ್ನದ ಸ್ಥಿತಿ ಹಾಗೂ ಲೀಸ್ ಪಡೆದ ನಂತರದ ಅಂಶಗಳನ್ನು ಪರಿಗಣಿಸಿ ರಾಯಲ್ಟಿ ಲೆಕ್ಕ ಹಾಕಲಾಗಿದೆ. ಈ ಎಲ್ಲವನ್ನು ಸೇರಿಸಿ ಇದೀಗ ನೋಟಿಸ್ ನೀಡಲಾಗಿದೆ ಎಂದು ವಿವರಿಸಿದರು.

ನಮಗೆ ಒನ್‌ಟೈಂ ಸೆಟ್ಲ್‌ಮೆಂಟ್‌ಗೆ ಸಂಬಂಧಿಸಿದಂತೆ ನೋಟಿಸ್ ನೀಡಿದ್ದಾರೆ. ದಂಡ ಹಾಕಲಾಗಿದೆ ಎನ್ನುವುದು ಸರಿಯಲ್ಲ. ಕಾನೂನುಬದ್ಧವಾಗಿ ಏನಿದೆ ಎಂಬುದನ್ನು ಸರ್ಕಾರ ಪರಿಶೀಲಿಸಲಿದೆ. ಕಾನೂನು ಪ್ರಕಾರ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ಡ್ರೋನ್ ಕ್ಯಾಮೆರಾ ಮೂಲಕ ಕ್ವಾರಿಗಳ ಸರ್ವೇ ನಡೆಸಲಾಗಿದ್ದು, ರಾಜ್ಯದ ವಿವಿಧೆಡೆ ಇದೇ ರೀತಿಯ ನೋಟಿಸ್‌ಗಳನ್ನು ನೀಡಲಾಗಿದೆ. ಹೀಗಾಗಿ ತಮ್ಮ ಪ್ರಕರಣವನ್ನು ಮಾತ್ರ ಪ್ರತ್ಯೇಕವಾಗಿ ನೋಡುವ ಅಗತ್ಯವಿಲ್ಲ ಎಂದು ಹೇಳಿದರು.

## ಹಿರೇಕೆರೂರು ಬರ ಘೋಷಣೆಗೂ ಮಾನದಂಡ

ಹಿರೇಕೆರೂರು ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡದಿರುವ ಕುರಿತು ಮಾತನಾಡಿದ ಸಚಿವರು, ಕೇಂದ್ರ ಸರ್ಕಾರದ ನಿಗದಿತ ಮಾನದಂಡಗಳ ಆಧಾರದ ಮೇಲೆಯೇ ಬರ ಘೋಷಣೆ ಮಾಡಲಾಗುತ್ತದೆ ಎಂದರು. ವಾರದಲ್ಲಿ ಮೂರು ದಿನ ಮಳೆಯಾಗದಿದ್ದರೆ ಬರ ಎಂದು ಘೋಷಣೆ ಮಾಡಬಹುದೆಂಬ ಕೇಂದ್ರ ಸರ್ಕಾರದ ಮಾನದಂಡವಿದೆ. ಮಳೆ ಪ್ರಮಾಣ, ಬೆಳೆ ಪರಿಸ್ಥಿತಿ ಸೇರಿದಂತೆ ನಿಗದಿತ ಮಾನದಂಡಗಳ ಆಧಾರದ ಮೇಲೆ ತಾಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಲಾಗುತ್ತದೆ. ಅದರಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
SATYA MITHI
Kannada Daily Morning

# ಹಾದಿ ತಪ್ಪಿದ ಪ್ರಜಾಸೇವೆ ಆಂದೋಲನ

**ರೋಣ:** ಪ್ರಜಾ ಸೇವೆ ಆಂದೋಲನಕ್ಕೆ ಎಲ್ಲ ಕಡೆಗಳಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಸಲ್ಲಿಕೆಯಾಗುವ ಬಹಳಷ್ಟು ಅರ್ಜಿಗಳು ನಿವೇಶನ, ವಸತಿಗಾಗಿಯೇ ಬರುತ್ತಿವೆ. ಹೀಗಾಗಿ ಸರ್ಕಾರ ಸರ್ಕಾರಿ ಜಮೀನಿನ ಲಭ್ಯತೆ ಮಾಹಿತಿ ಕೇಳಿದೆ ಶೀಘ್ರ ಸಲ್ಲಿಸಲಾಗುವುದು ಎಂದು ತಹಸೀಲ್ದಾರ್ ನಾಗರಾಜ ಕೆ. ಹೇಳಿದರು.

ತಾಲೂಕಿನ ಹುಲ್ಲೂರ ಗ್ರಾಮ ಪಂಚಾಯಿತಿಯಿಂದ ಆಯೋಜಿಸಿದ್ದ ಪ್ರಜಾಸೇವೆ ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾಸಾಶನ ಬಂದ್ ಆಗಿರುವುದಕ್ಕೂ ಅರ್ಜಿಗಳು ಬರುತ್ತಿವೆ, ಮಾಸಾಶನ ಬಂದ್ ಆದ ಫಲಾನುಭವಿಗಳ ಮರು ಪರಿಶೀಲನೆಗೆ ಸರ್ಕಾರ ಆದೇಶಿಸಿದೆ. ಹೀಗಾಗಿ ರೋಣ ತಾಲೂಕಿನಲ್ಲಿ 400ಕ್ಕೂ ಹೆಚ್ಚು ಅರ್ಜಿಗಳನ್ನು ಮರು ಪರಿಶೀಲನೆ ಮಾಡಲು ತಿಳಿಸಲಾಗಿದೆ ಎಂದರು.

ತಾಪಂ ಮಾಜಿ ಸದಸ್ಯ ದಶರಥ ಗಾಣಗೇರ ಮಾತನಾಡಿ, 75 ವರ್ಷದ ಹಿಂದೆಯೇ ನಮ್ಮ ಗ್ರಾಮಕ್ಕೆ ರಸ್ತೆ ಸೌಲಭ್ಯವಿತ್ತು. ಆದರೆ, ಈಗ ರಸ್ತೆ ಮುಚ್ಚಿ ಹೋಗಿದೆ. ಕೂಡಲೇ ಆ ರಸ್ತೆ ಸಮಸ್ಯೆಯನ್ನು ಬಗೆಹರಿಸಿಕೊಡಬೇಕು ಎಂದು ಒತ್ತಾಯಿಸಿದರು. ತಹಸೀಲ್ದಾರ್ ನಾಗರಾಜ ಕೆ. ಮಾತನಾಡಿ, ಒಂದೂವರೆ ವರ್ಷದ ಹಿಂದೆಯೇ ಆ ರಸ್ತೆಯ ಸ್ಥಳ ಪರಿಶೀಲನೆ ಮಾಡಿದ್ದೇನೆ. ಅಲ್ಲಿ ರಸ್ತೆ ಇತ್ತು ಎಂಬುದಕ್ಕೆ ಯಾವುದೇಪುರಾವೆಗಳು ಇಲ್ಲ. ದಾಖಲೆ ಕೊಟ್ಟರೆ ರಸ್ತೆ ನಿರ್ಮಿಸಿ ಕೋಡುತ್ತೇನೆ ಎಂದು ಭರವಸೆ ನೀಡಿದರು.

ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸಿದ್ದನಗೌಡ ಪಾಟೀಲ ಮಾತನಾಡಿ, ಹುಲ್ಲೂರ ಗ್ರಾಮದಲ್ಲಿ ಸ್ಮಶಾನ ಸಮಸ್ಯೆ ವಿಪರೀತವಾಗಿದೆ. 5000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ನಮ್ಮ ಗ್ರಾಮದಲ್ಲಿ ಸ್ಮಶಾನ ಇಲ್ಲದಿರುವುದು ಖೇಧಕರ. ಗ್ರಾಮದಲ್ಲಿ ಯಾರಾದರೂ ಮೃತಪಟ್ಟರೆ ಹಳ್ಳದಲ್ಲಿ ಹೋಗಿ ಅಂತ್ಯಸಂಸ್ಕಾರ ನೆರವೇರಿಸಬೇಕಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲೋಕೋಪಯೋಗಿ ಎಇಇ ಜಿ.ಎಸ್. ಪಾಟೀಲ, ಅಕ್ಷರ ದಾಸೋಹ ಕಾರ್ಯಕ್ರಮ ಅಧಿಕಾರಿ ಆರ್.ಎಲ್. ನಾಯ್ಕರ್, ಆರ್‌ಡಬ್ಲ್ಯುಎಸ್ ಅಧಿಕಾರಿ ರಶ್ಮಿ ನಡುವಿನಮನಿ, ಆಹಾರ ನಿರೀಕ್ಷಕಿ ಸುವರ್ಣಾ ಜುಮ್ಮನಕಟ್ಟಿ, ಹೆಸ್ಕಾಂ ಎಇಇ ರಾಘವೇಂದ್ರ ಕೋಚಿ, ಸೆಕ್ಷನ್ ಅಧಿಕಾರಿ ಎಂ. ಆಡಿನ ಎಂಆರ್‌ಬಿಸಿ ಅಧಿಕಾರಿ ಕೈಲಾಶ ಹಿರೇಮಠ, ಕೆ.ಎ. ಹಾದಿಮನಿ, ಸಿ.ಎಸ್. ನೀಲಗುಂದ, ಇತರರು ಇದ್ದರು.

**ಇಕ್ಕಟ್ಟಾದ ಜಾಗದಲ್ಲಿ ಕಾರ್ಯಕ್ರಮ:** ಸಾರ್ವಜನಿಕರ ಅರ್ಜಿ ಸ್ವೀಕಾರ, ಅಧಿಕಾರಿಗಳಿಗೆ ಕುಳಿತುಕೊಳ್ಳಲು ಸ್ಥಳಾವಕಾಶದ ಜತೆಗೆ ಹೊರಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಬೇಕು ಎಂಬ ನಿಯಮವಿದ್ದರೂ ಇಕ್ಕಟ್ಟಾದ ಸರ್ಕಾರಿ ಶಾಲೆಯಲ್ಲಿ ಕಾರ್ಯಕ್ರಮ ಆಯೋಜಿಸಿರುವುದು ಸಮಸ್ಯೆ ಹೇಳಿಕೊಳ್ಳಲು ಬಂದವರು ಗೊಣಗುತ್ತಲೇ ಸಾಗಿದರು.

**ಬಸ್ ಬಿಡಲು ಮನವಿ:** ರೋಣದಿಂದ ಹುಲ್ಲೂರ ಗ್ರಾಮಕ್ಕೆ ಪ್ರತಿ ದಿನ ಸಂಜೆ 7.30ಕ್ಕೆ ಬಸ್ ಸೌಲಭ್ಯವಿತ್ತು. ಆದರೆ, ಕಳೆದ ಒಂದು ವರ್ಷದಿಂದ ಆ ಸೌಲಭ್ಯ ಸ್ಥಗಿತಗೊಳಿಸಿ ಸಂಜೆ 6ಕ್ಕೆ ಒಂದು ಬಸ್ ಬಿಟ್ಟರೆ ಮತ್ತೆ ರಾತ್ರಿ 9.30ಕ್ಕೆ ಬಸ್ ವ್ಯವಸ್ಥೆ ಇದೆ. ಈ ಮೊದಲಿಂತೆ ಸಂಜೆ 7.30ಕ್ಕೆ ಬಸ್ ಬಿಡಬೇಕು ಎಂದು ಗ್ರಾಮಸ್ಥರು ಕೆಎಸ್‌ಆರ್‌ಟಿಸಿ ಮ್ಯಾನೇಜರ್‌ಗೆ ಮನವಿ ಸಲ್ಲಿಸಿದರು.



### ತಡವಾಗಿ ಬಂದ ತಹಸೀಲ್ದಾರ್ ಸಾಹೇಬ್ರು..

**ಕಳೆದ ವಾರ ಕೊತಬಾಳದಲ್ಲಿ ಆಯೋಜನೆಯಾಗಿದ್ದ ಪ್ರಜಾಸೇವೆ ಆಂದೋಲನದಲ್ಲಿ ಸಮಯಕ್ಕೆ ಸರಿಯಾಗ ಬಾರದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದ ತಹಸೀಲ್ದಾರ್ ನಾಗರಾಜ ಕೆ. ಅವರು ಇಂದು ಅವರೇ ತಡವಾಗಿ ಅಂದರೆ 11.45ಕ್ಕೆ ಕಾರ್ಯಕ್ರಮ ಸ್ಥಳಕ್ಕೆ ಬಂದರು. 10 ಗಂಟೆಗೆ ಆಗಮಿಸಿದ್ದ ಕೆಳ ಹಂತದ ಅಧಿಕಾರಿಗಳು ಕಾದು ಕುಳಿತು ಸಸ್ತಾಗಿದ್ದರು.**

### ಸಿಕ್ಕ ಸಿಕ್ಕವರ ಕೈಗೆ ಮೈಕು

**ಅರ್ಜಿ ಸಲ್ಲಿಸಲು ಬಂದಿದ್ದ ಗ್ರಾಮಸ್ಥರು ವೇದಿಕೆ ಏರಿ ಕೈಯಲ್ಲಿ ಮೈಕ್ ಹಿಡಿದು ಉದ್ದುದ್ದ ಭಾಷಣ ಶುರು ಮಾಡಿದರು. ಒಬ್ಬರ ನಂತರ ಮತ್ತೊಬ್ಬರು ಭಾಷಣ ಮಾಡಲು ಕೈಗೆ ಮೈಕ್ ಹಿಡಿದು ವೇದಿಕೆ ಏರಿದರೂ ಯಾರೊಬ್ಬರೂ ಅವರನ್ನು ತಡೆಯುವ ಗೋಜಿಗೆ ಹೋಗಲಿಲ್ಲ. ಅಧಿಕಾರಿಗಳಂತೂ ಮೂಕ ವಿಸ್ಮಿತರಾಗಿ ಕುಳಿತಿರುವುದು ಕಂಡು ಬಂದಿತು.**

# 4 ತಿಂಗಳ ಹಿಂದಿನ ವೃದ್ಧೆ ಕೊಲೆ ಪ್ರಕರಣ ಭೇದಿಸಿದ ಪೊಲೀಸ್ ಟೀಂ

## 72 ವರ್ಷದ ಅಂಜಿನಮ್ಮ ಹತ್ಯೆ ಪ್ರಕರಣದಲ್ಲಿ ಆರೋಪಿ ವೀರೇಶ್ ಬಂಧನ





**ಗಂಗಾವತಿ:** ನಗರ ಸಮೀಪದ ಶರಬಸವೇಶ್ವರ ಕ್ಯಾಂಪ್‌ನಲ್ಲಿ ಸುಮಾರು ನಾಲ್ಕು ತಿಂಗಳ ಹಿಂದೆ ನಡೆದಿದ್ದ 72 ವರ್ಷದ ಬಿ. ಅಂಜಿನಮ್ಮ ಅವರ ಕೊಲೆ ಪ್ರಕರಣವನ್ನು ಗಂಗಾವತಿ ಗ್ರಾಮೀಣ ಠಾಣೆ ಪೊಲೀಸರು ಸತತ ಹಾಗೂ ವೈಜ್ಞಾನಿಕ ತನಿಖೆಯ ಮೂಲಕ ಭೇದಿಸಿ, ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಾಹಿಲ್ ಬಾಗ್ಲಾ ಅವರ ನೇತೃತ್ವದಲ್ಲಿ, ಗಂಗಾವತಿ ಉಪವಿಭಾಗದ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಅವರ ಮಾರ್ಗದರ್ಶನದಲ್ಲಿ, ಗಂಗಾವತಿ ಗ್ರಾಮೀಣ ಠಾಣೆ ಸಿಪಿಐ ರಂಗಪ್ಪ ಹೆಚ್. ದೊಡ್ಡಮನಿ ಅವರ ನೇತೃತ್ವದ ವಿಶೇಷ ತಂಡ ಪ್ರಕರಣದ ತನಿಖೆ ನಡೆಸಿದೆ.

**ನ್ಯಾಮಗೌಡರ್ ಮಾರ್ಗದರ್ಶನದಲ್ಲಿ ತನಿಖೆಗೆ ವೇಗ:** ನಾಲ್ಕು ತಿಂಗಳ ಹಿಂದೆ ನಡೆದಿದ್ದ ಕೊಲೆ ಪ್ರಕರಣ ಆರೋಪಿಯ ಸುಳಿವು ಇಲ್ಲದೆ ಪೊಲೀಸರಿಗೆ ಸವಾಲಾಗಿತ್ತು. ಆದರೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಅವರು ತನಿಖಾ ತಂಡಕ್ಕೆ ಅಗತ್ಯ ಮಾರ್ಗದರ್ಶನ ನೀಡಿ, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುವಂತೆ ಸೂಚಿಸಿದ್ದರು ಎನ್ನಲಾಗಿದೆ.

ಪ್ರಕರಣದ ಪ್ರತಿಯೊಂದು ಅಂಶವನ್ನು ಪರಿಶೀಲಿಸಿದ ಪೊಲೀಸರು, ಮೃತ ಅಂಜಿನಮ್ಮ ಅವರ ಪರಿಚಯಸ್ಥರು, ಆಸ್ತಿ–ಪಾಸ್ತಿ, ಹಣಕಾಸಿನ ವ್ಯವಹಾರಗಳು ಹಾಗೂ ಘಟನೆಯ ಮುನ್ನ ಮತ್ತು ನಂತರದ ಚಲನವಲನಗಳ ಕುರಿತು ಮಾಹಿತಿ ಕಲೆಹಾಕಿದ್ದಾರೆ. ತನಿಖೆ ಮುಂದುವರಿದಂತೆ ಆರೋಪಿಯ ಮೇಲಿನ ಅನುಮಾನ ಗಾಢವಾಗಿದ್ದು, ಅಂತಿಮವಾಗಿ ವೀರೇಶ್ (39) ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಆಸ್ತಿ ಆಸೆಗಾಗಿ ಸಂಚು?:** ಪೊಲೀಸರ ಪ್ರಾಥಮಿಕ ತನಿಖೆಯ ಪ್ರಕಾರ, ಅಂಜಿನಮ್ಮ ಅವರೊಂದಿಗೆ ವಿವಾಹವಾಗಿದ್ದೇನೆ ಎಂದು ಹೇಳಿಕೊಂಡಿದ್ದ ವೀರೇಶ್, ವೃದ್ಧೆಯ ಹೆಸರಿನಲ್ಲಿದ್ದ ಆಸ್ತಿ, ಭೂಮಿ, ಚಿನ್ನಾಭರಣ ಹಾಗೂ ನಿವೇಶನಗಳ ಮೇಲೆ ಕಣ್ಣಿಟ್ಟಿದ್ದ ಎನ್ನಲಾಗಿದ್ದು, ಆಸ್ತಿ ಪಡೆಯುವ ಉದ್ದೇಶದಿಂದ ವಿವಾಹದ ನಾಟಕವಾಡಿ, ಕೆಲಕಾಲ ಅವರೊಂದಿಗೆ ಸಂಸಾರ ನಡೆಸಿ ಬಳಿಕ ಹತ್ಯೆ ಮಾಡಿರುವ ಸಾಧ್ಯತೆ ಕುರಿತು ತನಿಖೆಯಲ್ಲಿ ಅಂಶಗಳು ಬೆಳಕಿಗೆ ಬಂದಿವೆ ಎಂದು ತಿಳಿದುಬಂದಿದೆ.

ಆದರೆ, ಕೊಲೆಗೆ ನಿಖರ ಕಾರಣವೇನು ಹಾಗೂ ಪ್ರಕರಣದಲ್ಲಿ ಇನ್ನಾರಾದರೂ ಭಾಗಿಯಾಗಿದ್ದಾರೆಯೇ ಎಂಬುದರ ಕುರಿತು ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ನಾಲ್ಕು ತಿಂಗಳ ಸವಾಲಿಗೆ ತೆರೆ ಕೊಲೆ ನಡೆದ ನಂತರ ಆರೋಪಿ ಪತ್ತೆಹಚ್ಚುವುದು ಪೊಲೀಸರಿಗೆ ದೊಡ್ಡ ಸವಾಲಾಗಿತ್ತು. ಸಾಕ್ಷ್ಯಾಧಾರಗಳ ಕೊರತೆ ಸೇರಿದಂತೆ ಹಲವು ಅಂಶಗಳ ನಡುವೆಯೂ ಪೊಲೀಸರು ತನಿಖೆಯನ್ನು ಕೈಬಿಡದೆ ಮುಂದುವರಿಸಿದರು. ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಅವರ ನಿರಂತರ ಮಾರ್ಗದರ್ಶನದಲ್ಲಿ ಸಿಪಿಐ ರಂಗಪ್ಪ ದೊಡ್ಡಮನಿ ನೇತೃತ್ವದ ತಂಡ ವಿವಿಧ ಸಾಕ್ಷ್ಯಾಧಾರಗಳನ್ನು ಕಲೆಹಾಕಿ, ಆರೋಪಿ ಚಲನವಲನಗಳ ಕುರಿತು ಮಾಹಿತಿ ಸಂಗ್ರಹಿಸಿ, ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

**ಪೊಲೀಸ್ ತಂಡದ ಕಾರ್ಯಾಚರಣೆಗೆ ಮೆಚ್ಚುಗೆ:** ಗಂಭೀರ ಕೊಲೆ ಪ್ರಕರಣವನ್ನು ನಾಲ್ಕು ತಿಂಗಳ ಬಳಿಕವೂ ಬೆನ್ನಟ್ಟಿ ಆರೋಪಿಯನ್ನು ಬಂಧಿಸಿರುವ ಗಂಗಾವತಿ ಗ್ರಾಮೀಣ ಠಾಣೆ ಪೊಲೀಸರ ಕಾರ್ಯಾಚರಣೆ ಸಾರ್ವಜನಿಕ ವಲಯದಲ್ಲಿ ಗಮನ ಸೆಳೆದಿದೆ. ವಿಶೇಷವಾಗಿ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಅವರ ಮಾರ್ಗದರ್ಶನದಲ್ಲಿ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಸಿಪಿಐ ರಂಗಪ್ಪ ದೊಡ್ಡಮನಿ ನೇತೃತ್ವದ ತಂಡ ನಡೆಸಿದ ತನಿಖೆ ಪೊಲೀಸರ ವೃತ್ತಿಪರ ಕಾರ್ಯವೈಖರಿಗೆ ಉದಾಹರಣೆಯಾಗಿದೆ ಎಂದು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಪಂಚಾಯತ ಚುನಾವಣೆ ನಡೆಸಲು ಸಚಿವ ಸಂಪುಟ ತೀರ್ಮಾನ : ಇವಿಎಂ ಬದಲಿಗೆ ಬ್ಯಾಲೆಟ್ ಬಾಕ್ಸ್ ಬಳಕೆ – ಡಿಸಿಎಂ ಪರಮೇಶ್ವರ

ಮಂಗಳೂರು: ಮಂಗಳೂರಿನಲ್ಲಿ ಶುಕ್ರವಾರ ನಡೆದ ಸಚಿವ ಸಂಪುಟದಲ್ಲಿ ರಾಜ್ಯದಲ್ಲಿ ಪಂಚಾಯತ ಚುನಾವಣೆ ನಡೆಸುವ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗಿದೆ.

2026 ರ ಡಿಸೆಂಬರ್ ಒಳಗೆ ಗ್ರಾಮ ಪಂಚಾಯತ, ತಾಲೂಕು ಪಂಚಾಯತ ಹಾಗೂ ಜಿಲ್ಲಾ ಪಂಚಾಯತಗಳಿಗೆ ಚುನಾವಣೆ ನಡೆಸಲು ಮುಖ್ಯಮಂತ್ರಿ ಡಿಕೆ ಶಿವಕುಮಾರ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಾ ಜಿ. ಪರಮೇಶ್ವರ ಅವರು, ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಅವಧಿ ಪೂರ್ಣಗೊಂಡಿದ್ದು, ಡಿಸೆಂಬರ್ ಒಳಗೆ ಚುನಾವಣೆ ನಡೆಸಲು ಉದ್ದೇಶಿಸಲಾಗಿದೆ. ಚುನಾವಣೆ ನಡೆಸಲು ಇವಿಎಂ (ಇಗಿಒ) ಬದಲಿಗೆ ಮತಪೆಟ್ಟಿಗೆ ಬಳಕೆಗೆ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಚುನಾವಣೆ ನಡೆಸಲು ಅಗತ್ಯ ಮತಪೆಟ್ಟಿಗೆ ಖರೀದಿ ಮತ್ತು ಲೈವ್ ವೆಬ್ ಕಾಸ್ಟಿಂಗ್ (ಖತಜ ತಿಜಥಛಿಚಿಣುಟಿರ) ಮಾಡಲು 151.31 ಕೋಟಿ ರೂ. ವೆಚ್ಚಕ್ಕೆ ಸಚಿವ ಸಂಪುಟದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

# ಅರ್ಜಿ ಸಲ್ಲಿಸಲು ಬಂದವರನ್ನು ಆಚೆ ನೂಕಲು ಯತ್ನಿಸಿದ ರೋಣ ತಹಸೀಲ್ದಾರ್ ನಾಗರಾಜ

**ರೋಣ:** ಕಳೆದ ಮೂರು ವಾರದ ಹಿಂದೆಯಷ್ಟೇ ಆರಂಭವಾದ ಪ್ರಜಾಸೇವೆ ಆಂದೋಲನ ಅಧಿಕಾರಿಗಳ ನಿಷ್ಕಾಳಜಿಯಿಂದ ಹಳ್ಳ ಹಿಡಿಯುವ ಹಂತ ತಲುಪಿದೆ.

ತಾಲೂಕಿನ ಹುಲ್ಲೂರ ಗ್ರಾಮದಲ್ಲಿ ಆಯೋಜಿಸಿದ್ದ ಪ್ರಜಾಸೇವೆ ಆಂದೋಲನದಲ್ಲಿ ಅರ್ಜಿ ಸಲ್ಲಿಸಲು ಬಂದಿದ್ದ ಸಾರ್ವಜನಿಕರೊಬ್ಬರನ್ನು ತಹಸೀಲ್ದಾರ್ ನಾಗರಾಜ ಕೆ. ಅವರು ವೇದಿಕೆಯಿಂದ ಕೆಳಗಿಳಿಸಲು ನೂಕಾಟಕ್ಕೆ ಯತ್ನಿಸಿದ ಘಟನೆ ಶನಿವಾರ ನಡೆದಿದೆ.

ಹುಲ್ಲೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮನಕಟ್ಟಿ ಗ್ರಾಮದ ವ್ಯಕ್ತಿಯೊಬ್ಬರು ಆಶ್ರಯ ಮನೆಗಳು ನಿರ್ಮಾಣವಾಗಿ ಹಲವು ವರ್ಷಗಳೇ ಕಳೆದಿವೆ. ಈವರೆಗೂ ನಮಗೆ ಹಕ್ಕುಪತ್ರ ನೀಡಿಲ್ಲ. ಜತೆಗೆ ಸ್ಮಶಾನಕ್ಕಾಗಿ ಮೀಸಲಿಟ್ಟಿದ್ದ ಜಾಗವನ್ನು ಗ್ರಾಮದ ವ್ಯಕ್ತಿಯೊಬ್ಬರು ಅತಿಕ್ರಮಣ ಮಾಡಿಕೊಂಡಿದ್ದಾರೆ. ಕೂಡಲೇ ಸಮಸ್ಯೆ ಬಗೆಹರಿಸಿ ಅನುಕೂಲ ಕಲ್ಪಿಸಿಕೊಡಬೇಕು ಎಂದು ಅರ್ಜಿ ಸಲ್ಲಿಸಲು ಬಂದಿದ್ದರು. ಆದರೆ, ತಹಸೀಲ್ದಾರ್ ನಾಗರಾಜ ಕೆ. ಅವರು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸದೇ ಕೋಪದಿಂದ ಕೂಗಾಡಿ ಅರ್ಜಿ ಸಲ್ಲಿಸಲು ಬಂದಿದ್ದ ವ್ಯಕ್ತಿಯನ್ನು ವೇದಿಕೆಯಿಂದ ಕೆಳಗೆ ಇಳಿಯುವಂತೆ ಕೂಗಾಡಿದರು. ಆದರೆ, ವ್ಯಕ್ತಿ ಕೆಳಗೆ ಹೋಗದ್ದರಿಂದ ಮತ್ತಷ್ಟು ರೋಷಗೊಂಡ ತಹಸೀಲ್ದಾರ್ ಆತನ ಮೈ, ಕೈ, ಮುಟ್ಟಿ ಆಚೆ ನೂಕಲು ಯತ್ನಿಸಿದರು. ಇದರಿಂದ ಕೆಂಡಾಮಂಡಲರಾದ ಸೋಮನಕಟ್ಟಿ ಗ್ರಾಮಸ್ಥರು ನಮ್ಮ ಗ್ರಾಮದ ಸಮಸ್ಯೆಯನ್ನು ಕೇಳಿ, ಪ್ರಜಾಸೇವೆ ಆಂದೋಲನವೆಂದರೆ ಕೇವಲ ಹುಲ್ಲೂರ ಗ್ರಾಮಕ್ಕೆ ಸೀಮಿತವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



### ಮತ ಹಾಕುವಾಗ ಯೋಚಿಸಬೇಕು...

**ಕಳೆದ 15 ವರ್ಷದಿಂದ ಮನೆಗಳ ಹಕ್ಕುಪತ್ರ ನೀಡಿಲ್ಲ ಎಂದು ಸೋಮನಕಟ್ಟಿ ಗ್ರಾಮದ ವ್ಯಕ್ತಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು. ಆಗ ಪ್ರತಿಕ್ರಿಯಿಸಿದ ತಹಸೀಲ್ದಾರ್, 15 ವರ್ಷವಾದರೂ ಹಕ್ಕುಪತ್ರ ನೀಡಿಲ್ಲ ಎಂದಾದರೆ ನಾವು ಎಂಥವರನ್ನು ಆರಿಸಿ ತರುತ್ತಿದ್ದೇವೆ. ಎಂಥವರಿಗೆ ಮತ ಹಾಕುತ್ತಿದ್ದೇವೆ ಎಂಬುವುದರ ಅರಿವು ನಮಗಿರಬೇಕು ಎನ್ನುವ ಮೂಲಕ ಹಿಂಬಾಗಿಲ ರಾಜಕೀಯ ಪ್ರಚಾರದ ವೇದಿಕೆಯಾಗಿ ಬಳಸಿಕೊಂಡರು.**

# ರೈತರ ಖಾತೆಗೆ ಶೀಘ್ರ ಬರ ಪರಿಹಾರವನ್ನು ಜಮೆ ಮಾಡಿ: ಬೋಪಳಾಪುರ

**ರೋಣ:** ತಾಲೂಕನ್ನು ಬರಪೀಡಿತವನ್ನಾಗಿ ಘೋಷಿಸಬೇಕು. ಜತೆಗೆ ರೈತರ ಖಾತೆಗೆ ಶೀಘ್ರ ಬರ ಪರಿಹಾರವನ್ನು ಜಮೆ ಮಾಡಬೇಕು ಎಂದು ಕರ್ನಾಟಕ ರೈತ ಸೇನೆ ತಾಲೂಕು ಘಟಕದ ಅಧ್ಯಕ್ಷ ಶಿವಲಿಂಗಪ್ಪ ಬೋಪಳಾಪುರ ಒತ್ತಾಯಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆ ಪ್ರವಾಸಿ ಮಂದಿರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮಳೆ ಇಲ್ಲ, ಬೆಳೆ ಇಲ್ಲ. ರೈತರು ಆಕಾಶದತ್ತ ನೋಡುವ ಕಾಲ ಎದುರಾಗಿದೆ. ಸರ್ಕಾರ ರೈತರ ನೆರವಿಗೆ ಧಾವಿಸಿ ಅನುಕೂಲ ಕಲ್ಪಿಸಿಕೊಡಬೇಕು. ರಾಜ್ಯ ಸರ್ಕಾರ ನೇಗಿಲಯೋಗಿ ಯೋಜನೆಯನ್ನು ಹಿಂಪಡೆಯಬೇಕು. ಇದು ರೈತರಿಗೆ ಅವಮಾನ ಮಾಡುವ ಯೋಜನೆಯಾಗಿದೆ.



ನಾವು ಹಬ್ಬದ ರೀತಿ ಸಂಭ್ರಮಿಸಿ ಬಿತ್ತನೆ ಆರಂಭಿಸುತ್ತೇವೆ. ಬಿತ್ತನೆಗೆ ಸರ್ಕಾರದ ನೆರವು ಬೇಕಿಲ್ಲ ಎಂದರು. ಹನುಮಂತ ಹಳ್ಳಳ್ಳಿ ಮಾತನಾಡಿದರು.

ಮಲ್ಲಪ್ಪ ಚಳಗೇರಿ, ಯಲ್ಲಪ್ಪ ಆರ್. ಚಲವಾದಿ, ರುದ್ರಪ್ಪ ಕುರಿಯವರ, ವೀರೇಶ ಕಲಹಾಳ, ವೀರಪ್ಪ ಗವಾಯಿ, ಕವಿತಾ ಕಮ್ಮಾರ, ಕಲಾವತಿ ಹಿತ್ತಲಮನಿ, ಇತರರು ಇದ್ದರು.

# ಸಮೃದ್ಧ ಮಳೆಯಾಗಿ ಅಲ್ಲಾಹನಲ್ಲಿ ಮುಸ್ಲಿಮರ ಪ್ರಾರ್ಥನೆ

**ರೋಣ:** ಮಳೆ ಕೊರತೆಯಿಂದ ಬೆಳೆಗಳು ಹಾಳಾಗುತ್ತಿವೆ. ಜನ–ಜಾನುವಾರುಗಳಿಗೆ ನೀರಿನ ಕೊರತೆ ಎದುರಾಗಿದೆ. ಸಮೃದ್ಧ ಮಳೆಯಾಗಿ ಸಕಲ ಜೀವ ರಾಶಿಗಳಿಗೆ ಒಳಿತಾಗಲಿ ಎಂದು ಶನಿವಾರ ಮುಸ್ಲಿಮರು ಅಂಜುಮನ್ ಮೈದಾನದಲ್ಲಿ ಪ್ರಾರ್ಥಿಸಿದರು.

ಅಂಜುಮನ್ ಸಂಸ್ಥೆ ಅಧ್ಯಕ್ಷ ಜನಾಬ ಬಾವಾಸಾಬ ಆರ್. ಬೆಟಗೇರಿ ಮಾತನಾಡಿ, ಈ ವರ್ಷ ಮಳೆ ಕೊರತೆಯಿಂದ ಪ್ರತಿಯೊಬ್ಬರಿಗೂ ಸಮಸ್ಯೆಯಾಗಿದೆ. ರೈತರ ಬದುಕು ಬೀದಿಗೆ ಬಿದ್ದಿದೆ. ಸಾಲ ಮಾಡಿ ಬಿತ್ತನೆ ಮಾಡಿದ್ದ ಬೆಳೆ ರೈತರ ಕೈ ಸೇರಿಲ್ಲ. ಹೀಗಾಗಿ ಎಲ್ಲರನ್ನೂ ಕಾಪಾಡಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಲಾಗಿದೆ ಎಂದರು.

ನಿವೃತ್ತ ಶಿಕ್ಷಕ ಎ.ಎಸ್. ಖತೀಬ್, ಖಲೀಲ್ ಅಹ್ಮದ್ ರಾಮದುರ್ಗ, ಶರೀಫಸಾಬ ಮುಲ್ಲಾ, ಮಲಿಕಸಾಹೇಬ ಎಚ್ ಯಲಿಗಾರ, ಬಶೀರ ಕಟ್ಟಿಮನಿ, ಅಸ್ಲಾಂ ಕೊಪ್ಪಳ, ಜಾವಿದ ಮುಲ್ಲಾ, ಮುನ್ನಾ ದಳವಾಯಿ, ಜೀವನಸಾಹೇಬ ಓಲಿ, ಶಹಬಾಜ್ ಗದಗ, ತುಹೀದ ಜಲಾವರ, ಧರ್ಮದ ಗುರುಗಳು ಮತ್ತು ಅನೇಕ ಹಿರಿಯರು ಇದ್ದರು.



## ಗಜಾನನ ಶ್ರೀಶಕ್ತಿ ಮಹಿಳಾ ಸಂಘದಿಂದ ಭಕ್ತರಿಗೆ ಪ್ರಸಾದ ವಿತರಣೆ

**ಗಂಗಾವತಿ:** ಗಣೇಶ ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ಗಂಗಾವತಿ ನಗರದ 34ನೇ ವಾರ್ಡ್ ಹಿರೇಜಂತಕಲ್‌ನ ಸ್ವಾಗತ ಮಿಲ್ ಸಮೀಪ ಗಜಾನನ ಶ್ರೀಶಕ್ತಿ ಮಹಿಳಾ ಸಂಘದ ವತಿಯಿಂದ ಅನ್ನ ಸಂತರ್ಪಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮಹಿಳೆಯರಿಂದಲೇ ಪ್ರತಿಷ್ಠಾಪಿಸಲಾಗಿದ್ದ ಗಣೇಶನ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ವಾರ್ಡಿನ ಹಿರಿಯರು, ಯುವಕರು ಹಾಗೂ ಮಹಿಳೆಯರು ಗಣೇಶನ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

ನಾಳೆ ನಡೆಯಲಿರುವ ಗಣೇಶ ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ಇಂದು ಮಧ್ಯಾಹ್ನ ನಡೆದ ಅನ್ನ ಸಂತರ್ಪಣೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಉಸ್ತುವಾರಿಯನ್ನು ಸೈಯದ್ ಹುಸೇನ್ ಅವರು ವಹಿಸಿದ್ದರು.

ಇದೇ ಸಂದರ್ಭದಲ್ಲಿ ಗಜಾನನ ಶ್ರೀಶಕ್ತಿ ಮಹಿಳಾ ಸಂಘದ ವತಿಯಿಂದ ಪತ್ರಕರ್ತರನ್ನು ಶಾಲು ಹಾಗೂ ಹಾರ ಹಾಕಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಾಗರಾಜ,ಸಿದ್ದೇಶ್, ಮಹಿಳಾ ಹಿರಿಯರಾದ ವಿ. ಸುಮಂಗಲ, ಸುಮಾ ಸಿದ್ದೇಶ, ನಾಮಿನೇಟ್ ಮಾಜಿ ಕೌನ್ಸಿಲರ್ ಶಿವಗಂಗಾ, ಗಾಯತ್ರಿ, ಸರೋಜಾ, ಅಂಬಿಕಾ, ಶಾಂತಮ್ಮ, ನಫೀಸಾಬೇಗಂ, ಕವಿತಾ, ದುರ್ಗಮ್ಮ, ಸುಜಾತ, ಶಾರದಾ, ಲಕ್ಷ್ಮಿ ಸೇರಿದಂತೆ ಸಂಘದ ಸದಸ್ಯರು ಹಾಗೂ ವಾರ್ಡಿನ ಅನೇಕರು ಉಪಸ್ಥಿತರಿದ್ದರು.



## ರೈತರಿಗೆ ಪಿಎಂ ಕಿಸಾನ್ ಇ-ಕೆವೈಸಿ ಮಾಡಿಸುವಲ್ಲಿ ಕೃಷಿ ಸಖಿಯರ ಪಾತ್ರ ಮುಖ್ಯ: ಡಾ. ಅಭಿಲಾಷ

**ಗಂಗಾವತಿ:** ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿಯಲ್ಲಿ ಸಹಾಯಕ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಗಂಗಾವತಿ, ಕಾರಟಗಿ ಹಾಗೂ ಕನಕಗಿರಿ ತಾಲೂಕುಗಳ ಕೃಷಿ ಸಖಿಯರ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಸಹಾಯಕ ಕೃಷಿ ನಿರ್ದೇಶಕ ಡಾ. ಅಭಿಲಾಷ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಕಒ-ಏಖಖಂಓ) ಯೋಜನೆಯಡಿ ರೈತರಿಗೆ ಕಂತಿನ ಹಣ ಜಮೆಯಾಗಲು ಇ-ಕೆವೈಸಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಪಿಎಂ ಕಿಸಾನ್ ಯೋಜನೆಯ ಅರ್ಹ ರೈತರಿಗೆ ಇ-ಕೆವೈಸಿ ಮಾಡಿಸುವಲ್ಲಿ ಕೃಷಿ ಸಖಿಯರ ಪಾತ್ರ ಬಹಳ ಮುಖ್ಯವಾಗಿದ್ದು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಸಖಿಯರು ರೈತರಿಗೆ ಅಗತ್ಯ ಮಾಹಿತಿ ನೀಡಿ, ಇ-ಕೆವೈಸಿಯನ್ನು ಉಚಿತವಾಗಿ ಮಾಡಿಸಿಕೊಳ್ಳಲು ಸಹಕರಿಸಬೇಕು ಎಂದು ಅವರು ಸೂಚಿಸಿದರು.

ರೈತರು ತಮ್ಮ ಇ-ಕೆವೈಸಿಯನ್ನು ಕೃಷಿ ಸಖಿಯರ ಮೂಲಕ ಉಚಿತವಾಗಿ ಮಾಡಿಸಿಕೊಳ್ಳಬಹುದಾಗಿದೆ. ಅಲ್ಲದೆ, ಸಮೀಪದ ರೈತ ಸಂಪರ್ಕ ಕೇಂದ್ರ ಹಾಗೂ ಸಿಎಸ್‌ಇ (ಅಖಇ) ಕೇಂದ್ರಗಳಲ್ಲಿಯೂ ಇ-ಕೆವೈಸಿ ಮಾಡಿಸಿಕೊಳ್ಳುವ ಮೂಲಕ ಕೇಂದ್ರ ಸರ್ಕಾರದ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಸೌಲಭ್ಯವನ್ನು ಪಡೆಯುವಂತೆ ಅವರು ಮನವಿ ಮಾಡಿದರು. ರೈತರು ಇ-ಕೆವೈಸಿ ಮಾಡಿಸಿಕೊಳ್ಳದಿದ್ದಲ್ಲಿ ಪಿಎಂ ಕಿಸಾನ್ ಯೋಜನೆಯ ಕಂತಿನ ಹಣ ಜಮೆಯಾಗುವಲ್ಲಿ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ಅರ್ಹ ರೈತರು ಯಾವುದೇ ವಿಳಂಬ ಮಾಡದೆ ಕೂಡಲೇ ಇ-ಕೆವೈಸಿ ಪೂರ್ಣಗೊಳಿಸಿಕೊಳ್ಳಬೇಕು ಎಂದು ಡಾ. ಅಭಿಲಾಷ ಅವರು ತಿಳಿಸಿದರು. ಸಭೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು, ಆತ್ಮ ಸಿಬ್ಬಂದಿ, ಜಿಲ್ಲಾ ಪಂಚಾಯತ್ ಯುವ ವೃತ್ತಿಪರರು, ತಾಲೂಕು ಸಿಬ್ಬಂದಿ ಹಾಗೂ ಗಂಗಾವತಿ, ಕಾರಟಗಿ ಮತ್ತು ಕನಕಗಿರಿ ತಾಲೂಕುಗಳ ಕೃಷಿ ಸಖಿಯರು ಉಪಸ್ಥಿತರಿದ್ದರು.



# ವಿಷ್ಣುವರ್ಧನ್ ಬದುಕು ಯುವಜನತೆಗೆ ದಾರಿದೀಪ: ನಾಗರಾಜ ಮೇದಾರ

**ಗಂಗಾವತಿ:** ಕನ್ನಡ ಚಿತ್ರರಂಗದ ಮೇರು ನಟ, ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಬದುಕು, ವ್ಯಕ್ತಿತ್ವ ಹಾಗೂ ಕನ್ನಡಾಭಿಮಾನ ಇಂದಿನ ಯುವಜನತೆಗೆ ಸದಾ ಮಾದರಿಯಾಗಬೇಕು ಎಂದು ಡಾ.ವಿಷ್ಣುವರ್ಧನ್ ಅಭಿಮಾನಿ ನಾಗರಾಜ ಮೇದಾರ ಹೇಳಿದರು.

ನಗರದ ಡಾ.ವಿಷ್ಣುವರ್ಧನ್ ವೃತ್ತದಲ್ಲಿ ಡಾ.ವಿಷ್ಣುವರ್ಧನ್ ಅಭಿಮಾನಿಗಳ ಸಂಘ ಹಾಗೂ ಡಾ.ವಿಷ್ಣು ಸೇನಾ ಸಮಿತಿ ವತಿಯಿಂದ ಆಯೋಜಿಸಿದ್ದ ಡಾ.ವಿಷ್ಣುವರ್ಧನ್ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ವಿಷ್ಣುವರ್ಧನ್ ಅವರು ಕೇವಲ ನಟರಾಗಿರದೆ ಕನ್ನಡ ನಾಡು-ನುಡಿ, ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳಿಗೆ ಗೌರವ ನೀಡಿದ ಅಪರೂಪದ ಕಲಾವಿದರಾಗಿದ್ದರು ಎಂದರು.

ಕನ್ನಡ ಚಿತ್ರರಂಗಕ್ಕೆ ಡಾ.ವಿಷ್ಣುವರ್ಧನ್ ಅವರ ಕೊಡುಗೆ ಅಪಾರವಾಗಿದೆ. ಹಲವು ಸವಾಲುಗಳು ಎದುರಾದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ತಮ್ಮದೇ ಆದ ವಿಶಿಷ್ಟ ಅಭಿನಯದ ಮೂಲಕ ಕನ್ನಡ ಚಿತ್ರರಂಗದಲ್ಲಿ ಅಚ್ಚಳಿಯದ ಛಾಪು ಮೂಡಿಸಿದರು. ಅವರ ಸರಳತೆ, ಶಿಸ್ತು, ಸ್ನೇಹಪರತೆ ಹಾಗೂ ಕನ್ನಡದ ಮೇಲಿನ ಅಭಿಮಾನ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಾದ ಗುಣಗಳಾಗಿವೆ ಎಂದು ಹೇಳಿದರು. ಡಾ.ವಿಷ್ಣುವರ್ಧನ್ ಅವರ ಸಿನಿಮಾಗಳಲ್ಲಿನ ಪಾತ್ರಗಳು ಕೇವಲ ಮನರಂಜನೆಗೆ ಸೀಮಿತವಾಗಿರದೆ, ಧೈರ್ಯ, ನ್ಯಾಯ, ಪ್ರಾಮಾಣಿಕತೆ, ಕುಟುಂಬದ ಮೌಲ್ಯ ಹಾಗೂ ಸಮಾಜದ ಬಗ್ಗೆ ಕಾಳಜಿಯಂತಹ ಸಂದೇಶಗಳನ್ನು ನೀಡುತ್ತಿದ್ದವು. ಅವರ ಆದರ್ಶಗಳನ್ನು ಯುವಕರು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ನಾಗರಾಜ ಮೇದಾರ ಕರೆ ನೀಡಿದರು. ಡಾ.ವಿಷ್ಣುವರ್ಧನ್ ಅವರ ಹೆಸರಿನಲ್ಲಿ ನಡೆಯುವ ಅಭಿಮಾನಿ ಚಟುವಟಿಕೆಗಳು ಕೇವಲ ಜಯಂತಿ ಆಚರಣೆಗೆ ಸೀಮಿತವಾಗದೆ, ಸಮಾಜಮುಖಿ ಕಾರ್ಯಗಳು, ಯುವಜನರಲ್ಲಿ ಕನ್ನಡಾಭಿಮಾನ ಬೆಳೆಸುವ ಕಾರ್ಯಕ್ರಮಗಳು ಹಾಗೂ ಜನಪರ ಸೇವೆಗಳ ಮೂಲಕ ಮುಂದುವರಿಯಬೇಕು ಎಂದರು. ಈ ಸಂದರ್ಭದಲ್ಲಿ ಡಾ.ವಿಷ್ಣುವರ್ಧನ್ ಹಿರಿಯ ಅಭಿಮಾನಿ ರಂಗಪ್ಪ ನಾಯಕ, ಶರೀಫ್ ಖಾನವಳಿ, ಮಹೆಬೂಬ್ ಅಗ್ರಿಕಲ್ಚರ್, ರವಿ ಕರವೇ, ಕುಮಾರ ರಾಮ, ಶಿವು, ಉಮೇಶ್ ಕುಮಾರ್, ರಾಜು ಹಾಲು, ಸುನಿಲ್, ತೀರ್ಥ ಸೇರಿದಂತೆ ಇತರರು ಇದ್ದರು



## ಅದ್ದೂರಿಯಾಗಿ ಜರುಗಿದ 31ನೇ ವರ್ಷದ ಗಣೇಶೋತ್ಸವ

**ಬನಹಟ್ಟಿ:** ಬಾಲಗಜಾನನ ಮಿತ್ರ ಮಂಡಳಿ, ದತ್ತಾತ್ರೇಯ ನಗರ, ಬನಹಟ್ಟಿ ಇವರ ನೇತೃತ್ವದಲ್ಲಿ ಸತತ 31ನೇ ವರ್ಷದ ಗಣೇಶೋತ್ಸವ ಕಾರ್ಯಕ್ರಮವು ಭಕ್ತಿಭಾವ ಹಾಗೂ ಸಂಭ್ರಮದಿಂದ ಅದ್ದೂರಿಯಾಗಿ ಜರುಗಿತು.

ಗಣೇಶೋತ್ಸವದ ಅಂಗವಾಗಿ ಏಳು ದಿನಗಳ ಕಾಲ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ನಗರದ ನಿವಾಸಿಗಳು ತೇರದಾಳ ಮತಕ್ಷೇತ್ರದ ಶಾಸಕರಾದ ಸಿದ್ದು ಸವದಿ ಅವರು ಸೇರಿದಂತೆ ಸುತ್ತಮುತ್ತಲಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮಗಳ ಯಶಸ್ಸಿಗೆ ಸಾಕ್ಷಿಯಾದರು.

ಉತ್ಸವದ ದಿನವಾದ ಶನಿವಾರ ವಿಶೇಷವಾಗಿ ಸತ್ಯನಾರಾಯಣ ಪೂಜೆಯನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಬಳಿಕ ಸಾವಿರಾರು ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡರು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನ್ನಪ್ರಸಾದ ವಿತರಿಸುವ ಮೂಲಕ ಬಾಲಗಜಾನನ ಮಿತ್ರ ಮಂಡಳಿ ಸಾಮಾಜಿಕ ಕಳಕಳಿಯನ್ನು ಮೆರೆದಿತು.

ಅನ್ನಪ್ರಸಾದ ಸ್ವೀಕರಿಸಲು ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿದ್ದರೂ ಯಾವುದೇ ರೀತಿಯ ಗದ್ದಲ, ಗಲಾಟೆ ಉಂಟಾಗದಂತೆ ಮಂಡಳಿಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದ್ದರು. ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸರದಿ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಕಳೆದ ಮೂರು ದಶಕಗಳಿಂದ ನಿರಂತರವಾಗಿ ಗಣೇಶೋತ್ಸವವನ್ನು ಆಚರಿಸಿಕೊಂಡು ಬರುತ್ತಿರುವ ಬಾಲಗಜಾನನ ಮಿತ್ರ ಮಂಡಳಿಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಧಾರ್ಮಿಕ ಆಚರಣೆಯ ಜೊತೆಗೆ ಸಾಮಾಜಿಕ ಸೇವಾ ಕಾರ್ಯಗಳಿಗೂ ಆದ್ಯತೆ ನೀಡುತ್ತಿರುವ ಮಂಡಳಿಯ ಕಾರ್ಯಕರ್ತರ ಶ್ರಮಕ್ಕೆ ಸಾರ್ವಜನಿಕರು ಅಭಿನಂದನೆ ಸಲ್ಲಿಸಿದರು.

31ನೇ ವರ್ಷದ ಗಣೇಶೋತ್ಸವವು ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ನೆರವೇರಲು ಸಹಕರಿಸಿದ ದತ್ತಾತ್ರೇಯ ನಗರದ ನಿವಾಸಿಗಳು, ಭಕ್ತರು, ಮಹಿಳೆಯರು, ಯುವಕರು ಹಾಗೂ ಬಾಲಗಜಾನನ ಮಿತ್ರ ಮಂಡಳಿಯ ಪದಾಧಿಕಾರಿಗಳು ಮತ್ತು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಸಲ್ಲಿಸಲಾಯಿತು.





ನರೇಗಲ್ಲಿನ ದೇಸಾಯಿ ವಕೀಲರ ಪ್ಲಾಟಿನ, ಶ್ರೀ. ಎಚ್ ಕೆ .ಕುರ್ಲಗೇರಿ ರವರ ನೂತನ ಮನೆಯಲ್ಲಿ ಸ್ಥಾಪಿತವಾದ ಒಂದನೇ ವರ್ಷದ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ಬಸವರಾಜ್. ಬಳಗೋಡ ಕುಟುಂಬ, ರವಿ. ಕುಂಬಾರ್ ಕುಟುಂಬ, ವೀರನಗೌಡ ಮಲ್ಲನಗೌಡ, ಕುಟುಂಬ, ಶರಣಪ್ಪ ನರೇಗಲ್ಲ ಭಾಗವಹಿಸಿದ್ದರು.

## ಇಂದು ಗದಗ ಜಿಲ್ಲಾ ಛಾಯಾಗ್ರಾಹಕರ ಸಂಘದ 14ನೇ ವಾರ್ಷಿಕೋತ್ಸವ

### 187ನೇ ವಿಶ್ವ ಛಾಯಾಗ್ರಹಣ ದಿನಾಚರಣೆ, ಸರ್ವಸಾಧಾರಣ ಸಭೆ; ನೂತನ ಅಧ್ಯಕ್ಷರ ಆಯ್ಕೆ

**ಗದಗ:** ಗದಗ ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಘದ ವತಿಯಿಂದ 187ನೇ ವಿಶ್ವ ಛಾಯಾಗ್ರಹಣ ದಿನಾಚರಣೆ, 14ನೇ ವಾರ್ಷಿಕೋತ್ಸವ ಹಾಗೂ 2026-27ನೇ ಸಾಲಿನ ಸರ್ವಸಾಧಾರಣ ಸಭೆ ಸೆ.20ರಂದು ನಡೆಯಲಿದೆ.

ನಗರದ ಪೂಜ್ಯ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ಶಿವಾನುಭವ ಮಂಟಪದಲ್ಲಿ ಇಂದು

ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಛಾಯಾಗ್ರಹಣ ಕ್ಷೇತ್ರದ ಸಾಧಕರು, ಛಾಯಾಗ್ರಾಹಕರು, ಫೋಟೋ- ವಿಡಿಯೋ ಸ್ಟುಡಿಯೋ ಮಾಲೀಕರು, ಕಲರ್ ಲ್ಯಾಬ್ ಹಾಗೂ ಎಲ್‌ಇಡಿ ವಾಲ್ ಮಾಲೀಕರು ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳ ಛಾಯಾಗ್ರಾಹಕರು ಪಾಲ್ಗೊಳ್ಳಲಿದ್ದಾರೆ.

ದೊರೆಸ್ವಾಮಿ ವಿರಕ್ತಮಠ, ಭೈರನಹಟ್ಟಿ ಹಾಗೂ ತೋಂಟದಾರ್ಯ ಶಾಖಾಮಠ, ಶಿರೋಳದ ಶ್ರೀ ಮ.ನಿ.ಪ್ರ. ಶಾಂತಲಿಂಗ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದೆ. ಗದಗ ಜಿಲ್ಲಾ ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಶ್ರೀ ಕೃಷ್ಣಗೌಡ ಎಚ್. ಪಾಟೀಲ ಅವರು ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಪವನ ಜೆ. ಮೇಹರವಾಡೆ ಅಧ್ಯಕ್ಷತೆ ವಹಿಸಲಿದ್ದಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಸಿ.ಎಸ್. ಶಿವನಗೌಡ್ರ, ಗದಗ ಉಪವಿಭಾಗದ ಸಹಾಯಕ ಪೊಲೀಸ್ ಅಧಿಕಾರಿಗಳು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕರ್ನಾಟಕ ಫೋಟೋಗ್ರಾಫರ್ಸ್ ಅಸೋಸಿಯೇಷನ್‌ನ ರಾಜ್ಯ ಪದಾಧಿಕಾರಿಗಳು ಹಾಗೂ ವಿವಿಧ ಜಿಲ್ಲೆಗಳ ಛಾಯಾಗ್ರಾಹಕರ ಸಂಘಗಳ ಪ್ರತಿನಿಧಿಗಳೂ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ.

**ಸರ್ವಸಾಧಾರಣ ಸಭೆಯಲ್ಲಿ ಮಹತ್ವದ ವಿಚಾರಗಳು:** ಕಾರ್ಯಕ್ರಮದ ಅಂಗವಾಗಿ 2026-27ನೇ ಸಾಲಿನ ಸರ್ವಸಾಧಾರಣ ಸಭೆ ನಡೆಯಲಿದ್ದು, ಮಧ್ಯಾಹ್ನ 1.30ಕ್ಕೆ ಭೋಜನದ ನಂತರ ಮಧ್ಯಾಹ್ನ 2.30ರಿಂದ ಲೆಕ್ಕಪರಿಶೋಧನೆ, ಸಂಘದ ವಿವಿಧ ವಿಷಯಗಳ ಚರ್ಚೆ ಹಾಗೂ ನೂತನ ಅಧ್ಯಕ್ಷರ ಆಯ್ಕೆ ಸೇರಿದಂತೆ ಸಂಘದ ಆಡಳಿತಾತ್ಮಕ ವಿಚಾರಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ಛಾಯಾಗ್ರಹಣ ಕ್ಷೇತ್ರದ ಮಹತ್ವ, ವೃತ್ತಿಯಲ್ಲಿನ ಬದಲಾವಣೆಗಳು, ಆಧುನಿಕ ತಂತ್ರಜ್ಞಾನ ಮತ್ತು ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಕುರಿತು ಚರ್ಚೆ ನಡೆಯಲಿದೆ.

ಜಿಲ್ಲೆಯ ಗದಗ, ರೋಣ, ಗಜೇಂದ್ರಗಡ, ಶಿರಹಟ್ಟಿ, ನರಗುಂದ, ಲಕ್ಷ್ಮೇಶ್ವರ, ಮುಂಡರಗಿ ಸೇರಿದಂತೆ ವಿವಿಧ ತಾಲೂಕುಗಳ ಛಾಯಾಗ್ರಾಹಕರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಂಘದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

"ವೃತ್ತಿ ಧರ್ಮೋ ರಕ್ಷತಿ, ವೃತ್ತಿ ಧರ್ಮೋ ರಕ್ಷಿತಃ" ಎಂಬ ಆಶಯದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ



ಕುಷ್ಟಗಿ ತಾಲೂಕಿನ ಗುಮಗೇರಿ ಗ್ರಾಮದ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವಕರ್ಮ ಜಯಂತಿ, ಕಕ ಉತ್ಸವ ಆಚರಿಸಲಾಯಿತು. ಮುಖ್ಯಶಿಕ್ಷಕಿ ಗೀತಾ ಬಂಡಿ, ಎಸ್ಡಿಎಂಸಿ ಅಧ್ಯಕ್ಷ ರಾಜೇಸಾಬ್ ಬಾವಿಕಟ್ಟಿ, ಮಾರುತಿ ಭಜಂತ್ರಿ, ಶರಣಪ್ಪ ಗುರಿಕಾರ್, ಭೀಮೇಶಪ್ಪ ಬಡಿಗೇರ್, ಪ್ರಕಾಶ್ ಬಡಿಗೇರ್, ರಾಜಾಸಾಬ್ ಕೋಳೂರು, ಹನುಮರೆಡ್ಡಿ, ಅಕ್ಕಮಹಾದೇವಿ ಸೇರಿದಂತೆ ಇತರರಿದ್ದರು.

ಸತ್ಯ ಮಿತ್ಯ

SATY MITHI
Kannada Daily Morning

## ಹಿರೇಕೆರೂರಲ್ಲಿ ಪ್ರಜಾ ಸೇವಾ ಆಂದೋಲನ ಸಭೆ

**ಹಾವೇರಿ:** ಪ್ರಜಾ ಸೇವಾ ಆಂದೋಲನಾ ಸಭೆ ಸೆ. 19 ರಂದು ಬೆಳಿಗ್ಗೆ 10-30ಕ್ಕೆ ಹಿರೇಕೆರೂರು ಪಟ್ಟಣದ ಸರ್ವಜ್ಞ ಕಲಾ ಭವನದಲ್ಲಿ ಸಕ್ಕರೆ ಮತ್ತು ಜವಳಿ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಮಾನಪ್ಪ ಲಮಾಣಿ, ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಸಚಿವರು ಕಾರ್ಯಕ್ರಮದ ಸ್ಥಳದಲ್ಲಿ ವಿವಿಧ ಇಲಾಖೆಗಳಿಂದ ತೆರೆಯಲಾದ ಮಳಿಗೆಗಳಿಗೆ ಭೇಟಿ ನೀಡಿ, ವಿವಿಧ ಇಲಾಖೆಗಳಿಂದ ಸಾರ್ವಜನಿಕರಿಗೆ ಸಿಗುವ ಸೌಲಭ್ಯಗಳ ಕುರಿತು ಪರಿಶೀಲಿಸಲಿದ್ದಾರೆ.

ಸಭೆ ನಡೆಯುವ ಮುಂಚಿತವಾಗಿ ತಾಲೂಕಿನ ಎಲ್ಲಾ ಸಾರ್ವಜನಿಕರಿಗೆ ಪೂರ್ವ ಮುದ್ರಿತ ಅರ್ಜಿ ನಮೂನೆ, ಅವಶ್ಯ ದಾಖಲಾತಿಗಳ ಪಟ್ಟಿಗಳುಳ್ಳ ಲಕೋಟೆಯನ್ನು ಮನೆ-ಮನೆಗೆ ಸಿಬ್ಬಂದಿಗಳ ಮೂಲಕ ತಲುಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಅಂದಾಜು 10 ಸಾವಿರಕ್ಕೂ ಅಧಿಕ ಜನಸಾಮಾನ್ಯರು ಸೇರುವ ನಿರೀಕ್ಷೆ ಇದ್ದು, ಸ್ಥಳದಲ್ಲಿಯೇ ಸಚಿವರು ಸಾರ್ವಜನಿಕ ಕುಂದುಕೊರತೆಗಳನ್ನು ಆಲಿಸಿ, ಪರಿಹಾರ ನೀಡುವ ಸಾಧ್ಯತೆ ಇರುತ್ತದೆ.

ಆದ್ದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರಜಾಸೇವಾ ಆಂದೋಲನಾ ಸಭೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಾವೇರಿ:** ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಶೌರ್ಯ ಪ್ರಶಸ್ತಿ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಕ್ಕಳ ದಿನಾಚರಣೆ 2026ರ ಪ್ರಯುಕ್ತ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯಸಾಹಸ ಪ್ರದರ್ಶಿಸಿದ 06 ರಿಂದ 18 ವರ್ಷದೊಳಗಿನ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಶೌರ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ. ಪ್ರಕರಣವು ದಿನಾಂಕ 01-08-2025 ರಿಂದ 01-07-2026 ರೊಳಗೆ ನಡೆದಿರಬೇಕು. ದಿನಾಂಕ 01-08-2007 ರಂದು ಹಾಗೂ ನಂತರ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ.10,000/-ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ.

ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ ರೂ.25000/-ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ ರೂ.1.00ಲಕ್ಷದಂತೆ ನಗದು ಬಹುಮಾನ ಮತ್ತು ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ನಿಗದಿತ ಅರ್ಜಿ ನಮೂನೆಗಳನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾವೇರಿ ಈ ವಿಳಾಸದಲ್ಲಿ ಪಡೆದು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ ಅರ್ಜಿಯನ್ನು ದಿನಾಂಕ 21-09-2026ರೊಳಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯಾರ್ಥಿ ವೇತನ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

**ಹಾವೇರಿ:** ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಓಖಕ ಕಠಡಿಣಚಿಟ ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೆ.30ರವರೆಗೆ ಅವಧಿ ವಿಸ್ತರಿಸಲಾಗಿದೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಫ್ರಿಮೆಟ್ರಿಕ್ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ದಿನಾಂಕ 30-09-2026ರೊಳಗಾಗಿ ಧಿಜಝುಣಜ: ್ಣಣಠಿ://ಛಿಠಟಚಿಡ್ಝುಠಿ.ರಠಡಿ.ಟಿ ನಲ್ಲಿ ವಿಕಲಚೇತನ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿ, ಈ ಯೋಜನೆಯ ಸದುಪಯೋಗ ಪಡೆಸಿಕೊಳ್ಳಬೇಕು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿ ನಿಷೇಧ ಕುರಿತು ಜಾಗೃತಿ

**ಹಾವೇರಿ:** ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿ ನಿಷೇಧ ಕುರಿತು ಜಾಗೃತಿ ಜಾಥಾ ಹಮ್ಮಿಕೊಂಡು, ದಿನಾಂಕ18-09-2026 ರಂದು ಹಾವೇರಿ ಕೃಷಿ ಉತ್ಪನ್ನ ಮಾರುಕಟ್ಟೆಯ ವಿವಿಧ ವಾಣಿಜ್ಯ ಅಂಗಡಿಗಳ ಬೀದಿಗಳಲ್ಲಿ ಸಂಚರಿಸಿ ಕರಪತ್ರ ನೀಡಿ ಮತ್ತು ಭಿತ್ತಿಪತ್ರ ಅಂಟಿಸುವ ಮೂಲಕ ಹಾಗೂ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿಯ ನಿಷೇಧದ ಕುರಿತು ಘೋಷಣೆಗಳನ್ನು ಕೂಗುವ ಮೂಲಕ ಜಾಗೃತಿ ಮೂಡಿಸಲಾಯಿತು

ಈ ಸಂದರ್ಭದಲ್ಲಿ ಕಾರ್ಮಿಕ ಅಧಿಕಾರಿ ಶ್ರೀಮತಿ ತರನ್ನುಮ ಬೆಂಗಾಲಿ ಮಾತನಾಡಿ, ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1986 ಹಾಗೂ ತಿದ್ದುಪಡಿ ಕಾಯ್ದೆ-2016 ರ ಕುರಿತು ಮಾಹಿತಿ ನೀಡಿದರು. ಕರಪತ್ರ ಮತ್ತು ಭಿತ್ತಿಪತ್ರ ಅಂಟಿಸುವ ಮೂಲಕ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿಯ ನಿಷೇಧದ ಕುರಿತು ಘೋಷಣೆಗಳನ್ನು ಕೂಗುವ ಮೂಲಕ ಜಾಗೃತಿ ಮೂಡಿಸಲಾಯಿತು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಜಿ.ಬಿ.ಕಬ್ಬೇರಳ್ಳಿ ಮಾತನಾಡಿ, ಮಾರುಕಟ್ಟೆ ವ್ಯಾಪ್ತಿಯಲ್ಲಿ ಎಲ್ಲಿಯೂ 18 ವರ್ಷದೊಳಗಿನ ಯಾವುದೇ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು, ಒಂದು ವೇಳೆ ಕಾಯ್ದೆಯ ಉಲ್ಲಂಘನೆ ಪ್ರಕರಣಗಳು ದಾಖಲಾದಲ್ಲಿ ಅಂತಹ ವರ್ತಕರ ಪರವಾನಗಿ ರದ್ದುಗೊಳಿಸಲಾಗುವುದು ಎಂದು ತಿಳಿಸಿದರು.

ಸಹಾಯಕ ಕಾರ್ಯದರ್ಶಿ ಆರ್.ಎಲ್.ನೀರಲಗಿ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ರಾಘವೇಂದ್ರ ಶಿರೂರ, ಜಿಲ್ಲಾ ಮಕ್ಕಳ ಸಹಾಯವಾಣಿ ತಂಡದ ಸಂಯೋಜಕ ನಾಗರಾಜ ಕುರಿ, ರಮೇಶ ನಾಯಕ, ಪೊಲೀಸ್ ಸಿಬ್ಬಂದಿ ಇತರರು ಉಪಸ್ಥಿತರಿದ್ದರು.

### ಕನಸುಗಳ ಬೆನ್ನಟ್ಟಿ ಪರದೆಗಳೊಳಗೆ ಕಳೆದುಹೋದ ಪೀಳಿಗೆ

# ದುಡ್ಡು ಸಿಕ್ಕಿತು.. ಆದರೆ ಬದುಕು ಎಲ್ಲಿದೆ?



ಇಂದು ಜಗತ್ತು ಬೆರಳ ತುದಿಯಲ್ಲಿ ಇದೆ. ಒಂದು ಕ್ಲಿಕ್ ಮಾಡಿದರೆ ಊಟ ಮನೆಗೆ ಬರುತ್ತದೆ. ಮತ್ತೊಂದು ಕ್ಲಿಕ್ ಮಾಡಿದರೆ ಹಣ ಮತ್ತೊಬ್ಬರ ಖಾತೆಗೆ ಹೋಗುತ್ತದೆ. ಇನ್ನೊಂದು ಕ್ಲಿಕ್ ಮಾಡಿದರೆ ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ವ್ಯಕ್ತಿಯ ಮುಖ ಮೊಬೈಲ್ ಪರದೆಯಲ್ಲಿ ಕಾಣಿಸುತ್ತದೆ. ತಂತ್ರಜ್ಞಾನ ಮನುಷ್ಯನ ಬದುಕನ್ನು ಇಷ್ಟೊಂದು ಸುಲಭಗೊಳಿಸಿದೆ. ಆದರೆ ಇದೇ ತಂತ್ರಜ್ಞಾನದ ಮತ್ತೊಂದು ವಿಚಿತ್ರ ಪರಿಣಾಮವೆಂದರೆ ಜೀವನ ಸುಲಭವಾಗುತ್ತಾ ಹೋದಂತೆ ಮನುಷ್ಯನ ಮನಸ್ಸು ಮಾತ್ರ ಏಕೆ ಇಷ್ಟು ಕಷ್ಟಪಡುತ್ತಿದೆ ಎಂಬ ಪ್ರಶ್ನೆ! ವಿಶೇಷವಾಗಿ ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಯುವಜನರನ್ನು ನೋಡಿದರೆ ಈ ವೈರುಧ್ಯ ಇನ್ನಷ್ಟು ಸ್ಪಷ್ಟವಾಗುತ್ತದೆ. ಕೈಯಲ್ಲಿ ಅತ್ಯಾಧುನಿಕ ಮೊಬೈಲ್, ಬ್ಯಾಂಕ್ ಖಾತೆಯಲ್ಲಿ ಉತ್ತಮ ಸಂಬಳ, ಕಚೇರಿಯಲ್ಲಿ ಅತ್ಯಾಧುನಿಕ ಸೌಲಭ್ಯ, ವಾರಾಂತ್ಯದಲ್ಲಿ ರೆಸ್ಟೋರೆಂಟ್, ವಿದೇಶ ಪ್ರವಾಸ, ದುಬಾರಿ ಕಾರು ಹೊರಗಿನಿಂದ ನೋಡಿದವರಿಗೆ ಇದು ಕನಸಿನ ಬದುಕು. ಆದರೆ ಆ ಕನಸಿನೊಳಗೆ ಎಷ್ಟು ನಿದ್ರಾಹೀನತೆ ಇದೆ? ಎಷ್ಟು ಒತ್ತಡವಿದೆ? ಎಷ್ಟು ಒಂಟಿತನವಿದೆ? ಎಷ್ಟು ಮಾನವ ಸಂಬಂಧಗಳು 'ಸೈಲೆಂಟ್ ಮೋಡ್'ಗೆ ಹೋಗಿವೆ? ಎಂಬುದನ್ನು ಯಾರು ಕೇಳುತ್ತಾರೆ? ಇಂದು ಕೆಲ ಯುವಕರ ಜೀವನದಲ್ಲಿ ಒಂದು ವಿಚಿತ್ರ ಸಮೀಕರಣ ರೂಪುಗೊಂಡಿದೆ ಸಂಬಳ ಹೆಚ್ಚಾಗಿದೆ, ಸಮಯ ಕಡಿಮೆಯಾಗಿದೆ; ಸೌಲಭ್ಯಗಳು ಹೆಚ್ಚಾಗಿವೆ, ನೆಮ್ಮದಿ ಕಡಿಮೆಯಾಗಿದೆ; ಸಂಪರ್ಕಗಳು ಹೆಚ್ಚಾಗಿವೆ, ಸಂಬಂಧಗಳು ಕಡಿಮೆಯಾಗಿವೆ! ಮೊಬೈಲ್‌ನಲ್ಲಿ ಸಾವಿರಾರು 'ಕಾಂಟ್ಯಾಕ್ಟ್‌ಗಳು' ಇವೆ. ಆದರೆ ರಾತ್ರಿ ಮನಸ್ಸು ಕುಗ್ಗಿದಾಗ "ಏನಾಯಿತು?" ಎಂದು ಕೇಳುವ ಒಬ್ಬ ಆತ್ಮೀಯ ವ್ಯಕ್ತಿಯನ್ನು ಹುಡುಕಬೇಕಾದ ಪರಿಸ್ಥಿತಿ. ಇದು ತಂತ್ರಜ್ಞಾನದ ಸಾಧನೆಯೋ ಅಥವಾ ಮಾನವ ಸಂಬಂಧಗಳ ಸೋಲೋ? ಬೆಳಗ್ಗೆ ಕಣ್ಣು ತೆರೆದ ತಕ್ಷಣ ದೇವರ ಮುಖ ನೋಡುವ ಕಾಲ ಹೋಗಿದೆ; ಈಗ ಮೊದಲು ಮೊಬೈಲ್ ಪರದೆ ಕಾಣಬೇಕು! ರಾತ್ರಿ ಮಲಗುವ ಮುನ್ನ ಕೊನೆಯದಾಗಿ ಕುಟುಂಬದವರ ಮುಖ ನೋಡುವುದಕ್ಕಿಂತ ಮೊಬೈಲ್‌ನ ನೋಟಿಫಿಕೇಶನ್ ನೋಡಬೇಕು. ಮಧ್ಯದಲ್ಲಿ ಎಂಟು-ಹತ್ತು ಗಂಟೆ ಕಂಪ್ಯೂಟರ್ ಪರದೆ. ಹೀಗಾಗಿ ಕಣ್ಣುಗಳು "ಸ್ವಾಮಿ, ನಮಗೂ ರಜೆ ಕೊಡಿ!" ಎಂದು ಹೇಳುತ್ತವೆ. ಆದರೆ ಕಚೇರಿ ಹೇಳುತ್ತದೆ "ಡೆಡ್‌ಲೈನ್ ಇದೆ!" ದೇಹ ಹೇಳುತ್ತದೆ "ಸ್ವಲ್ಪ ನಡೆಯೋಣ." ಮನಸ್ಸು ಹೇಳುತ್ತದೆ "ಸ್ವಲ್ಪ ವಿಶ್ರಾಂತಿ ಬೇಕು." ಆದರೆ ಲ್ಯಾಪ್‌ಟಾಪ್ ಹೇಳುತ್ತದೆ "ಒಂದು ಮೀಟಿಂಗ್ ಇನ್ನೂ ಬಾಕಿ ಇದೆ!" ಇದೇ ಬದುಕಿನ ವ್ಯಂಗ್ಯ.

ಕೆಲಸದ ಒತ್ತಡ ಇಂದಿನ ಯುವಜನರ ಬದುಕಿನ ಪ್ರಮುಖ ಸಮಸ್ಯೆಯಾಗಿದೆ. ಸ್ಪರ್ಧೆ ತೀವ್ರವಾಗಿದೆ. ಕಂಪನಿಗಳ ನಿರೀಕ್ಷೆಗಳು ಹೆಚ್ಚಿವೆ. ನಿರಂತರವಾಗಿ ಹೊಸ ತಂತ್ರಜ್ಞಾನ ಕಲಿಯಬೇಕು. ಹೊಸ ಕೌಶಲ್ಯ ಪಡೆಯಬೇಕು. ಗುರಿ ತಲುಪಬೇಕು. ಸಮಯಕ್ಕೆ ಪ್ರಾಜೆಕ್ಟ್ ಮುಗಿಸಬೇಕು. ತಂಡದ ಒತ್ತಡ ಎದುರಿಸಬೇಕು. ಕೆಲವೊಮ್ಮೆ ರಾತ್ರಿ ಕೆಲಸ, ಕೆಲವೊಮ್ಮೆ ಬೇರೆ ದೇಶಗಳ ಸಮಯಕ್ಕೆ ಅನುಗುಣವಾಗಿ ಸಭೆಗಳು. ಹೀಗೆ ಕೆಲಸದ ಸಮಯ ಮತ್ತು ವೈಯಕ್ತಿಕ ಸಮಯದ ಗಡಿ ನಿಧಾನವಾಗಿ ಮಾಯವಾಗುತ್ತಿದೆ. ಹಿಂದೆ ಕಚೇರಿ ಮುಗಿದರೆ ಕೆಲಸ ಮುಗಿಯುತ್ತಿತ್ತು. ಈಗ ಕಚೇರಿ ಲ್ಯಾಪ್‌ಟಾಪ್‌ನಲ್ಲಷ್ಟೇ ಇಲ್ಲ; ಮೊಬೈಲ್‌ನಲ್ಲೂ ಬಂದಿದೆ. ಬಾಸ್ ಕಚೇರಿಯಲ್ಲಿದ್ದರೂ ಪರವಾಗಿಲ್ಲ, ವಾಟ್ಸ್ ಆ್ಯಪನಲ್ಲಿ ಕಾಣಿಸಿಕೊಂಡರೆ ಸಾಕು! "ಒಂದು ಸಣ್ಣ ಮೇಲ್ ಕಳುಹಿಸಿ", "ಒಂದು ಸಣ್ಣ ಅಪ್‌ಡೇಟ್ ಕೊಡಿ", "ಐದು ನಿಮಿಷದ ಕಾಲ್ ಇದೆ" ಈ ಐದು ನಿಮಿಷಗಳು ಕೆಲವೊಮ್ಮೆ ಜೀವನದ ಐದು ಗಂಟೆಗಳನ್ನು ನುಂಗುತ್ತವೆ. ಇದರ ಪರಿಣಾಮ ನಿದ್ರೆಯ ಮೇಲೂ ಬೀಳಬಹುದು. ನಿದ್ರೆ ದೇಹದ ಅಗತ್ಯ. ಆದರೆ ಇಂದಿನ ಜೀವನಶೈಲಿಯಲ್ಲಿ ನಿದ್ರೆಯನ್ನೇ ಐಷಾರಾಮಿ ವಸ್ತುವಿನಂತೆ ನೋಡಲಾಗುತ್ತಿದೆ. "ನಾಲ್ಕು ಗಂಟೆ ನಿದ್ರೆ ಮಾಡಿದರೂ ಸಾಕು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುವವರು ಇದ್ದಾರೆ. ಆದರೆ ಕಾರಿಗೆ ನಾಲ್ಕು ಗಂಟೆ ಸರ್ವಿಸ್ ಮಾಡದೇ ಓಡಿಸಿದರೆ ಎಂಜಿನ್ ಹಾಳಾಗುತ್ತದೆ ಎಂಬುದು ಗೊತ್ತಿರುವ ಮನುಷ್ಯ, ತನ್ನ ದೇಹಕ್ಕೂ ನಿರಂತರ ನಿರ್ವಹಣೆ ಬೇಕು ಎಂಬುದನ್ನು ಏಕೆ ಮರೆತುಬಿಡುತ್ತಾನೆ? ಇದರ ನಡುವೆ ಪರದೆ ಬಳಕೆಯ ಮತ್ತೊಂದು ಸಮಸ್ಯೆ. ಕೆಲಸದ ಪರದೆ ಮುಗಿದ ಮೇಲೆ ಮನರಂಜನೆಯ ಪರದೆ ಆರಂಭ. ಕಂಪ್ಯೂಟರ್ ಮುಚ್ಚಿದ ತಕ್ಷಣ ಮೊಬೈಲ್ ತೆರೆದುಕೊಳ್ಳುತ್ತದೆ. ಮೊಬೈಲ್‌ನಿಂದ ಸಾಮಾಜಿಕ ಜಾಲತಾಣ. ಅಲ್ಲಿಂದ ವೀಡಿಯೋ. ವೀಡಿಯೋದಿಂದ ಮತ್ತೊಂದು ವೀಡಿಯೋ. ಹೀಗೆ ಬೆರಳುಗಳು ಕೆಲಸ ಮಾಡುತ್ತವೆ, ಕಣ್ಣುಗಳು ಕೆಲಸ ಮಾಡುತ್ತವೆ, ಮೆದುಳು ಕೆಲಸ ಮಾಡುತ್ತದೆ; ದೇಹ ಮಾತ್ರ ಕುರ್ಚಿಯಲ್ಲೇ ಕುಳಿತಿರುತ್ತದೆ! ಇದರಿಂದ ಕಣ್ಣಿನ ದಣಿವು, ಕಣ್ಣು ಒಣಗುವಿಕೆ, ತಲೆನೋವು ಮತ್ತು ಇತರ ಅಸೌಕರ್ಯಗಳು ಕಾಣಿಸಿಕೊಳ್ಳಬಹುದು. "ಡ್ರೈ ಐಸ್" ಬಂದರೆ ಕಣ್ಣಿಗೆ ಕೃತಕ ಕಣ್ಣೀರು ಹಾಕಬಹುದು; ಆದರೆ ಜೀವನವೇ ಒಣಗಿದರೆ ಯಾವ ನೀರು ಅದನ್ನು ಸರಿಪಡಿಸುತ್ತದೆ? ತಂತ್ರಜ್ಞಾನ ಮನುಷ್ಯರನ್ನು ಹತ್ತಿರಕ್ಕೆ ತಂದಿದೆ ಎಂದು ನಾವು ಹೇಳುತ್ತೇವೆ. ಆದರೆ ಕೆಲವೊಮ್ಮೆ ಅದು ದೇಹಗಳನ್ನು ಹತ್ತಿರಕ್ಕೆ ತಂದರೂ ಮನಸ್ಸುಗಳನ್ನು ದೂರ ಮಾಡುತ್ತಿದೆ. ಒಂದೇ ಮನೆಯಲ್ಲಿರುವ ಗಂಡ-ಹೆಂಡತಿ ಇಬ್ಬರೂ ತಮ್ಮ ತಮ್ಮ ಮೊಬೈಲ್‌ನಲ್ಲಿ ಬೇರೆ ಬೇರೆ ಲೋಕಗಳಲ್ಲಿ ಮುಳುಗಿರುತ್ತಾರೆ. ತಂದೆ ಮಾತನಾಡಲು ಬಯಸುತ್ತಾನೆ; ಮಗನಿಗೆ ಸಮಯವಿಲ್ಲ. ತಾಯಿ ಕಾಯುತ್ತಾಳೆ; ಮಗಳು ಆನ್‌ಲೈನ್ ಮೀಟಿಂಗ್‌ನಲ್ಲಿ. ಅಜ್ಜ-ಅಜ್ಜಿ ಮೊಮ್ಮಕ್ಕಳೊಂದಿಗೆ ಮಾತನಾಡಲು ಬಯಸುತ್ತಾರೆ; ಮೊಮ್ಮಕ್ಕಳಿಗೆ ಗೇಮ್‌ನಲ್ಲಿ 'ಲೆವೆಲ್' ಮುಗಿಸಬೇಕಿದೆ! ಮನೆಯೊಳಗೆ ಎಲ್ಲರೂ ಇದ್ದಾರೆ. ಆದರೆ ಯಾರೂ ಯಾರೊಂದಿಗೂ ಇಲ್ಲ! ಇದು ಸಾಮಾಜಿಕ ಏಕಾಂತದ ಹೊಸ ರೂಪ. ಕೆಲವರಲ್ಲಿ ಒಂಟಿತನ, ಆತಂಕ, ಮನೋನೊಂದು ಅಥವಾ ಸಾಮಾಜಿಕವಾಗಿ ಹಿಂದೆ ಸರಿಯುವ ಅನುಭವಗಳು ಕಾಣಿಸಿಕೊಳ್ಳಬಹುದು. ಇವುಗಳಿಗೆ ಒಂದೇ ಕಾರಣ ಎಂದು ಹೇಳಲಾಗದು. ಆದರೆ ನಿರಂತರ ಕೆಲಸದ ಒತ್ತಡ, ನಿದ್ರೆಯ ಕೊರತೆ, ದೈಹಿಕ ಚಟುವಟಿಕೆಯ ಅಭಾವ ಮತ್ತು ನೈಜ ಸಾಮಾಜಿಕ ಸಂಪರ್ಕದ ಕೊರತೆ ಇಂತಹ ಸಮಸ್ಯೆಗಳಿಗೆ ಪರಿಸರವನ್ನು ಸೃಷ್ಟಿಸಬಹುದು. ಹಣದ ಪಾತ್ರವನ್ನೂ ಇಲ್ಲಿ ಪ್ರಶ್ನಿಸಬೇಕಾಗುತ್ತದೆ. ಹಣ ಬೇಕು. ಹಣವಿಲ್ಲದೆ ಬದುಕು ಕಷ್ಟ. ಉತ್ತಮ ಶಿಕ್ಷಣ, ಮನೆ, ಆರೋಗ್ಯ, ಭದ್ರತೆ ಎಲ್ಲಕ್ಕೂ ಹಣ ಅಗತ್ಯ. ಆದರೆ ಹಣವನ್ನು ಸಾಧನದಿಂದ ಗುರಿಯನ್ನಾಗಿ ಮಾಡಿಕೊಂಡಾಗ ಸಮಸ್ಯೆ ಶುರುವಾಗುತ್ತದೆ. "ಎಷ್ಟು ಸಂಬಳ?" ಎಂಬ ಪ್ರಶ್ನೆ ಯುವಕರ ಜೀವನದ ಮುಖ್ಯ ಅಳತೆಯಾಗಿಬಿಟ್ಟಿದೆ. "ಹೇಗಿದ್ದೀಯ?" ಎಂಬ ಪ್ರಶ್ನೆ ಹಿಂಬದಿಗೆ ಸರಿದಿದೆ. "ಯಾವ ಕಂಪನಿಯಲ್ಲಿ ಕೆಲಸ?" ಎನ್ನುವುದು ಮುಖ್ಯ. "ಕೆಲಸದಿಂದ ಸಂತೋಷವಾಗಿದೆಯೇ?" ಎನ್ನುವುದು ಅನಗತ್ಯ ಪ್ರಶ್ನೆಯಾಗಿದೆ. ಒಂದು ವಿಚಿತ್ರ ಸಮಾಜವನ್ನು ನಾವು ಕಟ್ಟುತ್ತಿದ್ದೇವೆ. ವ್ಯಕ್ತಿಯ ಪ್ಯಾಕೇಜ್ ದೊಡ್ಡದಾದರೆ ಅವನ ಮೌಲ್ಯವೂ ದೊಡ್ಡದು ಎಂದು ಭಾವಿಸುತ್ತೇವೆ. ಆದರೆ ಅವನ ಹೃದಯದಲ್ಲಿ ನೆಮ್ಮದಿ ಇದೆಯೇ ಎಂಬುದನ್ನು ಯಾರೂ ಅಳೆಯುವುದಿಲ್ಲ. ಬ್ಯಾಂಕ್ ಬ್ಯಾಲೆನ್ಸ್ ನೋಡಲು ಆ್ಯಪ್ ಇದೆ; ಮನಸ್ಸು, ಭಾವನೆ, ನೆಮ್ಮದಿಗಳ ಬ್ಯಾಲೆನ್ಸ್ ನೋಡಲು ಯಾವ ಆ್ಯಪ್ ಇದೆ? ಇದೇ ಸಂದರ್ಭದಲ್ಲಿ ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಕೂಡ ಯುವಜನರಲ್ಲಿ ಜಾಗೃತಿ ಅಗತ್ಯ. ಸಂತಾನೋತ್ಪತ್ತಿ ಸಾಮರ್ಥ್ಯದ ಮೇಲೆ ವಯಸ್ಸು, ದೇಹದ ತೂಕ, ಧೂಮಪಾನ, ಮದ್ಯಪಾನ, ಕೆಲವು ವೈದ್ಯಕೀಯ ಪರಿಸ್ಥಿತಿಗಳು, ಜೀವನಶೈಲಿ ಹಾಗೂ ಇತರ ಅನೇಕ ಅಂಶಗಳು ಪರಿಣಾಮ ಬೀರಬಹುದು. ಆದ್ದರಿಂದ ಐಟಿ ಉದ್ಯೋಗವೇ ನೇರವಾಗಿ ಬಂಜೆತನಕ್ಕೆ ಕಾರಣ ಎಂದು ಹೇಳುವುದು ಸರಿಯಲ್ಲ. ಆದರೆ ನಿರಂತರ ಒತ್ತಡ, ನಿದ್ರೆಯ ಕೊರತೆ, ವ್ಯಾಯಾಮದ ಕೊರತೆ ಮತ್ತು ಅಸ್ವಸ್ಥ ಜೀವನಶೈಲಿ ಸೇರಿದಂತೆ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಅಂಶಗಳನ್ನು ನಿರ್ಲಕ್ಷಿಸುವುದು ಭವಿಷ್ಯದಲ್ಲಿ ಸಮಸ್ಯೆಗಳಿಗೆ ಕಾರಣವಾಗಬಹುದು ಎಂಬ ಎಚ್ಚರಿಕೆ ಅಗತ್ಯ. ಇಂದು ಮದುವೆಯ ವಯಸ್ಸು ಮುಂದೂಡಲ್ಪಡುತ್ತಿದೆ. ಉದ್ಯೋಗದ ಸ್ಥಿರತೆ, ಆರ್ಥಿಕ ಭದ್ರತೆ, ವೃತ್ತಿಜೀವನದ ಗುರಿ ಇವೆಲ್ಲವೂ ಸಹಜ ಕಾರಣಗಳು. ಆದರೆ ಬದುಕಿನ ಎಲ್ಲ ನಿರ್ಧಾರಗಳೂ "ಮೊದಲು ಕರಿಯರ್, ನಂತರ ಜೀವನ" ಎಂಬ ಸೂತ್ರಕ್ಕೆ ಸೀಮಿತವಾದರೆ, ಒಂದು ಹಂತದಲ್ಲಿ "ಜೀವನವೇ ಯಾವಾಗ ಆರಂಭವಾಗುತ್ತದೆ?" ಎಂಬ ಪ್ರಶ್ನೆ ಎದುರಾಗಬಹುದು. ಮಕ್ಕಳನ್ನು ಪಡೆಯುವ ವಿಷಯವೂ ವೈಯಕ್ತಿಕ ನಿರ್ಧಾರವೇ ಸರಿ. ಆದರೆ ಕುಟುಂಬದ ಮುಂದಿನ ಪೀಳಿಗೆ ಆರೋಗ್ಯಕರವಾಗಿರಬೇಕಾದರೆ ಆರೋಗ್ಯದ ಬಗ್ಗೆ ಅರಿವು ಇಂದಿನಿಂದಲೇ ಇರಬೇಕು. "ಮಗು ಹುಟ್ಟಿದ ಮೇಲೆ ನೋಡಿಕೊಳ್ಳೋಣ" ಎಂಬ ಮನೋಭಾವಕ್ಕಿಂತ, ಆರೋಗ್ಯಕರ ಜೀವನಶೈಲಿ, ವೈದ್ಯಕೀಯ ಸಲಹೆ ಮತ್ತು ಕುಟುಂಬದ ಬೆಂಬಲದ ಬಗ್ಗೆ ಮುಂಚಿತವಾಗಿ ಯೋಚಿಸುವುದು ಮುಖ್ಯ. ಇಂದು ನಾವು ಮಕ್ಕಳಿಗೆ ಭವಿಷ್ಯ ಕೊಡಲು ಹಣ ಉಳಿಸುತ್ತಿದ್ದೇವೆ. ಆದರೆ ಅವರಿಗೆ ಭವಿಷ್ಯ ನೀಡುವ ಮೊದಲು ನಮ್ಮ ವರ್ತಮಾನವನ್ನು ಉಳಿಸಿಕೊಳ್ಳುತ್ತಿದ್ದೇವೆಯೇ? ಅವರಿಗೆ ದೊಡ್ಡ ಮನೆ ಕೊಡಲು ಸಾಲ ಮಾಡುತ್ತೇವೆ. ಆದರೆ ಆ ಮನೆಯಲ್ಲಿ ಮಾತನಾಡಲು ಸಮಯ ಕೊಡುತ್ತೇವೆಯೇ? ಅವರಿಗೆ ದುಬಾರಿ ಶಿಕ್ಷಣ ಕೊಡುತ್ತೇವೆ. ಆದರೆ ಜೀವನದ ಅರ್ಥ ಕಲಿಸುತ್ತೇವೆಯೇ? ಮಕ್ಕಳು ನಮ್ಮನ್ನು ನೋಡಿ ಕಲಿಯುತ್ತಾರೆ. ತಂದೆ ಸದಾ ಲ್ಯಾಪ್‌ಟಾಪ್ ಮುಂದೆ ಇದ್ದರೆ, ತಾಯಿ ಸದಾ ಮೊಬೈಲ್‌ನಲ್ಲಿ ಇದ್ದರೆ, ಮನೆಯಲ್ಲಿ ಮಾತುಕತೆಗಿಂತ ನೋಟಿಫಿಕೇಶನ್‌ಗಳೇ ಜೋರಾಗಿದ್ದರೆ, ಮುಂದಿನ ಪೀಳಿಗೆಯಿಂದ ನಾವು ಏನು ನಿರೀಕ್ಷಿಸಬೇಕು?: ನಾವು ಮಕ್ಕಳಿಗೆ "ಮೊಬೈಲ್ ಕಡಿಮೆ ಬಳಸಿ" ಎಂದು ಹೇಳುತ್ತೇವೆ. ಆದರೆ ನಮ್ಮ ಕೈಯಲ್ಲಿರುವ ಮೊಬೈಲ್ ಅನ್ನು ಕೆಳಗಿಡುವುದಿಲ್ಲ. "ಕುಟುಂಬದೊಂದಿಗೆ ಸಮಯ ಕಳೆಯಿರಿ" ಎಂದು ಹೇಳುತ್ತೇವೆ. ಆದರೆ ಕುಟುಂಬದ ಊಟದ ಮೇಜಿನಲ್ಲಿಯೇ ಫೋನ್ ನೋಡುತ್ತೇವೆ. "ಆರೋಗ್ಯ ಮುಖ್ಯ" ಎಂದು ಹೇಳುತ್ತೇವೆ. ಆದರೆ ವ್ಯಾಯಾಮಕ್ಕೆ ಸಮಯವಿಲ್ಲ. "ಸಂಬಂಧಗಳನ್ನು ಉಳಿಸಿಕೊಳ್ಳಿ" ಎಂದು ಹೇಳುತ್ತೇವೆ. ಆದರೆ ಸಂಬಂಧಿಕರ ಮನೆಗೆ ಹೋಗಲು ಸಮಯವಿಲ್ಲ. ಇದು ನಮ್ಮ ಪೀಳಿಗೆಯ ದೊಡ್ಡ ವ್ಯಂಗ್ಯ! ಐಟಿ ಕಂಪನಿಗಳ ಮೇಲೂ ಕೆಲವು ಜವಾಬ್ದಾರಿಗಳಿವೆ. ಉದ್ಯೋಗಿಯ ಸಾಮರ್ಥ್ಯವನ್ನು ಬಳಸಿಕೊಳ್ಳುವುದು ಕಂಪನಿಯ ಹಕ್ಕು; ಆದರೆ ಅವನ ಆರೋಗ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವುದು ಆರೋಗ್ಯಕರ ಕೆಲಸದ ಸಂಸ್ಕೃತಿ ಅಲ್ಲ. ಕೆಲಸದ ಸಮಯ, ವಿಶ್ರಾಂತಿ, ಮಾನಸಿಕ ಆರೋಗ್ಯ, ದೈಹಿಕ ಚಟುವಟಿಕೆ ಮತ್ತು ಕುಟುಂಬದ ಸಮಯಕ್ಕೆ ಗೌರವ ನೀಡುವ ವಾತಾವರಣ ನಿರ್ಮಾಣವಾಗಬೇಕು. ಯುವಜನರೂ ತಮ್ಮ ಆರೋಗ್ಯದ ಜವಾಬ್ದಾರಿಯನ್ನು ಇತರರ ಮೇಲೆ ಹಾಕಬಾರದು. ಕಂಪನಿ ಒತ್ತಡ ಕೊಡುತ್ತದೆ ಎಂದು ಹೇಳಿ ನಿದ್ರೆಯನ್ನು ತ್ಯಜಿಸುವುದು, ಕೆಲಸದ ಹೆಸರಿನಲ್ಲಿ ಊಟದ ಸಮಯವನ್ನು ಬದಲಿಸುವುದು, ವ್ಯಾಯಾಮಕ್ಕೆ ಅವಕಾಶವಿಲ್ಲ ಎಂದು ಹೇಳುವುದು, ಮನಸ್ಸಿನ ಸಮಸ್ಯೆಗಳನ್ನು ಮುಚ್ಚಿಡುವುದು ಇವೆಲ್ಲವೂ ದೀರ್ಘಾವಧಿಯಲ್ಲಿ ಬೆಲೆ ಕಟ್ಟಿಸಬಹುದು. ಕೆಲಸ ಜೀವನದ ಒಂದು ಭಾಗ; ಜೀವನವೇ ಕೆಲಸವಲ್ಲ. ಯಶಸ್ಸಿನ ವ್ಯಾಖ್ಯಾನವನ್ನೂ ಬದಲಿಸಬೇಕಾಗಿದೆ. ದೊಡ್ಡ ಸಂಬಳ ಪಡೆಯುವುದು ಯಶಸ್ಸಿನ ಒಂದು ಭಾಗವಾಗಬಹುದು. ಆದರೆ ಉತ್ತಮ ಆರೋಗ್ಯ, ನೆಮ್ಮದಿ, ಕುಟುಂಬದೊಂದಿಗೆ ಸಂಬಂಧ, ಸ್ನೇಹ, ಸಾಮಾಜಿಕ ಜವಾಬ್ದಾರಿ ಮತ್ತು ಸ್ವಂತ ಆಸಕ್ತಿಗಳಿಗೆ ಸಮಯ ಇವುಗಳೂ ಯಶಸ್ಸಿನ ಭಾಗವೇ. "ನಾನು ವರ್ಷಕ್ಕೆ ಎಷ್ಟು ಸಂಪಾದಿಸುತ್ತೇನೆ?" ಎಂಬ ಪ್ರಶ್ನೆಯ ಜೊತೆಗೆ "ನಾನು ವರ್ಷಕ್ಕೆ ಎಷ್ಟು ಬಾರಿ ನಗುತ್ತೇನೆ?" ಎಂಬ ಪ್ರಶ್ನೆಯೂ ಇರಬೇಕು. "ನನ್ನ ಬಳಿ ಎಷ್ಟು ಆಸ್ತಿ ಇದೆ?" ಎಂಬುದರ ಜೊತೆಗೆ "ನನ್ನನ್ನು ನಿಜವಾಗಿ ಪ್ರೀತಿಸುವವರು ಎಷ್ಟು ಜನ?" ಎಂಬ ಪ್ರಶ್ನೆಯೂ ಇರಬೇಕು. "ನನ್ನ ಫೋನ್‌ನಲ್ಲಿ ಎಷ್ಟು ಕಾಂಟ್ಯಾಕ್ಟ್‌ಗಳಿವೆ?" ಎಂಬುದರ ಜೊತೆಗೆ "ನನ್ನ ನೋವನ್ನು ಹಂಚಿಕೊಳ್ಳಲು ಎಷ್ಟು ಜನರಿದ್ದಾರೆ?" ಎಂಬ ಪ್ರಶ್ನೆಯೂ ಇರಬೇಕು. ತಂತ್ರಜ್ಞಾನವನ್ನು ವಿರೋಧಿಸುವುದು ಪರಿಹಾರವಲ್ಲ. ಐಟಿ ಕ್ಷೇತ್ರವನ್ನು ದೂಷಿಸುವುದೂ ಪರಿಹಾರವಲ್ಲ. ತಂತ್ರಜ್ಞಾನ ನಮಗೆ ಅಪಾರ ಅವಕಾಶಗಳನ್ನು ನೀಡಿದೆ. ಲಕ್ಷಾಂತರ ಯುವಜನರಿಗೆ ಉದ್ಯೋಗ ಸೃಷ್ಟಿಸಿದೆ. ವಿಶ್ವದೊಂದಿಗೆ ಸಂಪರ್ಕ ಕಲ್ಪಿಸಿದೆ. ಸಮಸ್ಯೆ ತಂತ್ರಜ್ಞಾನದಲ್ಲೇ ಇಲ್ಲ; ಅದನ್ನು ಬಳಸುವ ನಮ್ಮ ರೀತಿಯಲ್ಲಿ ಇದೆ. ಮನುಷ್ಯನು ಯಂತ್ರವನ್ನು ನಿರ್ಮಿಸಿದ್ದಾನೆ. ಆದರೆ ಈಗ ಯಂತ್ರದ ವೇಗಕ್ಕೆ ತಕ್ಕಂತೆ ಬದುಕಲು ಮನುಷ್ಯನೇ ತನ್ನನ್ನು ಬದಲಾಯಿಸಿಕೊಳ್ಳುತ್ತಿದ್ದಾನೆ. ಕೊನೆಗೆ ಯಂತ್ರಕ್ಕೆ 'ರೀಸ್ಟಾರ್ಟ್' ಬಟನ್ ಇದೆ; ಮನುಷ್ಯನ ಜೀವನಕ್ಕೆ ಅಂತಹ ಬಟನ್ ಇಲ್ಲ! ಹೀಗಾಗಿ ಈಗಲೇ ಎಚ್ಚರವಾಗಬೇಕಿದೆ. ಯುವಜನರ ಆರೋಗ್ಯವನ್ನು ಕೇವಲ ವೈಯಕ್ತಿಕ ಸಮಸ್ಯೆ ಎಂದು ನೋಡುವಂತಿಲ್ಲ. ಇದು ಕುಟುಂಬದ, ಉದ್ಯೋಗದಾತರ, ಶಿಕ್ಷಣ ವ್ಯವಸ್ಥೆಯ ಮತ್ತು ಸಮಾಜದ ಜವಾಬ್ದಾರಿಯೂ ಹೌದು. ಆರೋಗ್ಯಕರ ಕೆಲಸದ ಸಂಸ್ಕೃತಿ, ಮಾನಸಿಕ ಆರೋಗ್ಯದ ಬಗ್ಗೆ ಮುಕ್ತ ಸಂಭಾಷಣೆ, ಸಮರ್ಪಕ ನಿದ್ರೆ, ವ್ಯಾಯಾಮ, ಆರೋಗ್ಯಕರ ಆಹಾರ, ನೈಜ ಮಾನವ ಸಂಬಂಧಗಳು ಮತ್ತು ಡಿಜಿಟಲ್ ಬಳಕೆಯಲ್ಲಿ ಸಮತೋಲನ ಇವೆಲ್ಲವೂ ಅಗತ್ಯ. ಮುಂದಿನ ಪೀಳಿಗೆ ಹೇಗಿರುತ್ತದೆ ಎಂಬುದನ್ನು ಇಂದು ಯಾರೂ ಖಚಿತವಾಗಿ ಭವಿಷ್ಯವಾಣಿ ಮಾಡಲು ಸಾಧ್ಯವಿಲ್ಲ. ಆದರೆ ನಾವು ಇಂದು ಯಾವ ರೀತಿಯ ಬದುಕನ್ನು ನಿರ್ಮಿಸುತ್ತೇವೆ ಎಂಬುದು ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುವುದಂತೂ ಸತ್ಯ. ಹೀಗಾಗಿ ಪ್ರಶ್ನೆ "ಯುವಕರು ಎಷ್ಟು ಸಂಪಾದಿಸುತ್ತಿದ್ದಾರೆ?" ಎಂಬುದಲ್ಲ. "ಅವರು ಸಂಪಾದಿಸುತ್ತಿರುವ ಬದುಕಿನಲ್ಲಿ ಅವರು ಎಷ್ಟು ಬದುಕುತ್ತಿದ್ದಾರೆ?" ಎಂಬುದೇ ನಿಜವಾದ ಪ್ರಶ್ನೆ. ಹಣ ಬೇಕು. ತಂತ್ರಜ್ಞಾನ ಬೇಕು. ಅಭಿವೃದ್ಧಿ ಬೇಕು. ಐಟಿ ಕ್ಷೇತ್ರವೂ ಬೇಕು. ಆದರೆ ಇವೆಲ್ಲವೂ ಮನುಷ್ಯನಿಗಾಗಿ. ಮನುಷ್ಯನೇ ಇವುಗಳಿಗಾಗಿ ಅಲ್ಲ. ಬ್ಯಾಂಕ್ ಖಾತೆ ತುಂಬಿ, ಮನೆ ತುಂಬಿ, ಗ್ಯಾಜೆಟ್‌ಗಳು ತುಂಬಿ, ಆದರೆ ಹೃದಯ ಖಾಲಿಯಾದರೆ ಆ ಬದುಕಿನ ಲೆಕ್ಕಾಚಾರದಲ್ಲಿ ದೊಡ್ಡ ಕೊರತೆ ಇದೆ. ಸಾಫ್ಟ್‌ವೇರ್‌ಗೆ ಅಪ್‌ಡೇಟ್ ಬೇಕು. ಕಂಪ್ಯೂಟರ್‌ಗೆ ಅಪ್‌ಗ್ರೇಡ್ ಬೇಕು. ಆದರೆ ಇಂದಿನ ಮನುಷ್ಯನಿಗೆ ಅದಕ್ಕಿಂತ ಮುಖ್ಯವಾಗಿ ಬೇಕಾಗಿರುವುದು ತನ್ನ ಬದುಕಿನ 'ರೀಸೆಟ್'! ಅದು ಇಲ್ಲದಿದ್ದರೆ ಮುಂದಿನ ಪೀಳಿಗೆಗೆ ನಾವು ಆಸ್ತಿ, ತಂತ್ರಜ್ಞಾನ ಮತ್ತು ಹಣವನ್ನು ಕೊಟ್ಟು ಹೋಗಬಹುದು; ಆದರೆ ನೆಮ್ಮದಿ, ಆರೋಗ್ಯ ಮತ್ತು ಮಾನವೀಯ ಸಂಬಂಧಗಳನ್ನು ಕೊಡಲು ವಿಫಲರಾಗಬಹುದು. ಆಗ ಇತಿಹಾಸ ನಮ್ಮನ್ನು ಒಂದು ಪ್ರಶ್ನೆ ಕೇಳಬಹುದು "ಮನುಷ್ಯನ ಬದುಕನ್ನು ಸುಲಭಗೊಳಿಸಲು ತಂತ್ರಜ್ಞಾನ ನಿರ್ಮಿಸಿದಿರಿ; ಹಾಗಾದರೆ ಮನುಷ್ಯನ ಬದುಕನ್ನೇ ಏಕೆ ಕಠಿಣಗೊಳಿಸಿದಿರಿ?"



ಅನಂತ ಪಪ್ಪು,
ಬೆಳಗಾವಿ
ಮೋ:9448527870

## ವೈಯಕ್ತಿಕ ಫಲಾನುಭವಿಗೆ 1 ಶುಗರ್ ಕೇನ್ ಹಾರ್ವೆಸ್ಟರ್ ಹಬ್ ಯೋಜನೆ

**ಗದಗ:** ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ರೈತರಿಗೆ ವಿತರಿಸುವ ಉದ್ದೇಶದಿಂದ ಗದಗ ಜಿಲ್ಲೆ ಸಾಮಾನ್ಯ ವರ್ಗ ಘಟಕದ ವೈಯಕ್ತಿಕ ಫಲಾನುಭವಿಗೆ 1 ಸ್ಯುಗರ್ ಕೇನ್ ಹಾರ್ವೆಸ್ಟರ್ ಹಬ್ ಹಾಗೂ 1 ಕಂಬೈನಡ್ ಹಾರ್ವೆಸ್ಟರ್ ಹಬ್ ಕ್ರಿಯಾ ಯೋಜನೆ ಅನುಮೋದನೆಗೊಂಡಿರುತ್ತದೆ. ಆಸಕ್ತ ರೈತರು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಈ ಕೆಳಗಿನ ದಾಖಲಾತಿಯೊಂದಿಗೆ ದಿನಾಂಕ 30-09-2026 ರೊಳಗಾಗಿ ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸುವುದು. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ, ಜಿಲ್ಲಾಮಟ್ಟದ ಉಪಕರಣ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು. ನಂತರ ಉಪ ಕೃಷಿ ನಿರ್ದೇಶಕರ ಕಛೇರಿಯಿಂದ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾಮಟ್ಟದ ಉಪಕರಣ ಸಮಿತಿಯಲ್ಲಿ ಮಂಡಿಸಲಾಗುವುದು. ಜಿಲ್ಲಾಮಟ್ಟದ ಸಮಿತಿ ಸಭೆಯಲ್ಲಿ ಸ್ಯುಗರ್ ಕೇನ್ ಹಾರ್ವೆಸ್ಟರ್ ಹಬ್ ಹಾಗೂ 1 ಕಂಬೈನಡ್ ಹಾರ್ವೆಸ್ಟರ್ ಹಬ್ ಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಕೆಯಾದಲ್ಲಿ ಲಾಟರಿ ಮುಖಾಂತರ ಫಲಾನುಭವಿಯನ್ನು ಆಯ್ಕೆ ಮಾಡಲಾಗುವುದು. ನಂತರ ಜಂಟಿ ಕೃಷಿ ನಿರ್ದೇಶಕರ ಕಛೇರಿಯಿಂದ ಅಯ್ಕೆಯಾದ ಫಲಾನುಭವಿಗೆ ಕೃಷಿ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಲು ಕಾರ್ಯಾದೇಶ ನೀಡಲಾಗುವುದು. ಸ್ಯುಗರಕೇನ್ ಹಾರ್ವೆಸ್ಟರ್ ಮತ್ತು ಕಂಬೈನಡ್ ಹಾರ್ವೆಸ ರ್ ಹಬ್‌ವಾರು ವಾರು ಸ್ವೀಕೃತವಾದ ಯಂತ್ರೋಪಕರಣಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಮತ್ತು ಉಪ ಕೃಷಿ ನಿರ್ದೇಶಕರು ಪರಿಶೀಲಿಸಿ, ಸಹಾಯಧನವನ್ನು ನಿಯಮಾನುಸಾರ ಸಂಬಂಧಿಸಿದ ಸಾಲದ ಬ್ಯಾಂಕ್ ಖಾತೆಗೆ ಕ್ರೆಡಿಟ್ ಲಿಂಕಡ್ ಬ್ಯಾಕ್ ಎಂಡೆಡ್ ಸಬ್ಸಿಡಿ ಮೂಲಕ ಜಮಾ ಮಾಡಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಫಲಾನುಭವಿಗಳು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲಾತಿಗಳು:** ಪಹಣಿ ಪ್ರತಿ, ಆಧಾರ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ ಮತ್ತು ಎಫ್‌ಐಡಿ ಸಂಖ್ಯೆ. ರೂ. 100 ಛಾಪಾ ಕಾಗದದ ಮೇಲೆ ಹಬ್‌ನ್ನು ಪರಬಾರೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ (ನೋಟರಿಯೊಂದಿಗೆ). ಸಹಾಯಧನವು ಕ್ರೆಡಿಟ್ ಲಿಂಕಡ್ ಬ್ಯಾಕ್ ಎಂಡೆಡ್ ಸಬ್ಸಿಡಿ ಆಗಿರುವುದರಿಂದ ಸಂಬಂಧಿಸಿರುವ ಬ್ಯಾಂಕ್‌ನಿಂದ ತಾತ್ವಿಕ ಸಾಲ ಮಂಜೂರಾತಿ ಪತ್ರ . ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ/ಉಪ ಕೃಷಿ ನಿರ್ದೇಶಕರ ಕಛೇರಿ/ಜಂಟಿ ಕೃಷಿ ನಿದೇಶಕರ ಕಛೇರಿಗೆ ಸಂಪರ್ಕಿಸಬಹ್ಮದಾಗಿದೆ.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114